ಇದೆ. ಈ ರೀತಿ ಪುನಃ ಇಂತಹ ಘಟನೆ ಮರುಕಳಿಸದಂತೆ ಸರ್ಕಾರ ಮತ್ತು ನನ್ನ ಕಛೇರಿ ಕ್ರಮ ತೆಗೆದುಕೊಳ್ಳುತ್ತದೆ ಎಂಬ ಭರವಸೆಯನ್ನು ಕೊಡುತ್ತೇನೆ.

ಶ್ರಿ ವಾಟಾಳ್ ನಾಗರಾಜ್.—ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ನಡೆಯುವಾಗ ಅನೇಕ ವಿಷಯಗಳನ್ನು ಹೇಳಬೇಕಾಗುತ್ತದೆ. ಆಗ ಮಾನ್ಯ ಮುಖ್ಯಮಂತ್ರಿಗಳು ಸಭೆಯಲ್ಲಿ ಕುಳಿತುಕೊಂಡಿದ್ದರೆ, ಅವರು ಗಮನಹರಿಸತಕ್ಕಂಥ ವಿಷಯಗಳನ್ನು ಹೇಳಬಹುದು. ನಿನ್ನೆ ಕೂಡ ಬಹಳ ಹೊತ್ತು ಅವರು ಸಭೆಯಲ್ಲಿ ಇರಲಿಲ್ಲ. ಆದ್ದರಿಂದ ತಾವು ದಯವಾಡಿ ತಾವು ಅವರನ್ನು ಸಭೆಗೆ ಕರೆಯಿಸಿ ಎಂದು ವಿನಂತಿ ಮಾಡಿಕೊಳ್ಳುತ್ತೇನೆ. ಮತ್ತೆ ನಾನೂ ಕೂಡ ಎರಡು ಗಮನ ಸೆಳೆಯುವ ಸೂಚನೆಗಳನ್ನು ಕಳುಹಿಸಿದ್ದೆ. ಪತ್ರ ಬರೆದು ಕಳುಹಿಸಿದರೂ ಅದಕ್ಕೆ ಉತ್ತರ ಬರುವುದಿಲ್ಲ. ಹೇಗೆ ಕೇಳಿದರೂ ಉತ್ತರ ಬರುವುದಿಲ್ಲ. ಈಗಲೂ ನನ್ನ ಕೈಯಲ್ಲಿ ಎರಡು ಕಾಲಿಂಗ್ ಅಟೆನ್‌ಷನ್ಸ್ ಇವೆ, ತಾವು ಕೇಳಿ ಎಂದರೆ ಕೇಳುತ್ತೇನೆ. ನಿನ್ನೆ ಮಧ್ಯಾಹ್ನ ಕಛೇರಿಯಿಂದ ಎಲ್ಲಾ ಫಾರಂಗಳನ್ನೂ ತರಿಸಿ, ಭರ್ತಿ ಮಾಡಿ ವ್ಯವಸ್ಥಿತವಾಗಿ ಕಳುಹಿಸಿದರೂ ತಾವು ಒಪ್ಪುತ್ತಾ ಇಲ್ಲ.

ಅಧ್ಯಕ್ಷರು.—ನೀವು, ಈ ತಕ್ಷಣ ಗಮನ ಸೆಳೆಯುವುದಕ್ಕಾಗುವುದಿಲ್ಲ. ಇದಕ್ಕೆ ಯಾವ ಮಾರ್ಗ ಅನುಸರಿಸಬೇಕೆಂದು ಹೇಳುತ್ತೇನೆ. ಈಗ ಮಾನ್ಯ ವಿರೋಧಪಕ್ಷದ ನಾಯಕರು ಒಪ್ಪಿಗೆ ಕೊಡುವುದಾದರೆ, ಕರ್ನಾಟಕ ಸ್ಥಳೀಯ ಸಂಸ್ಥೆಗಳ ಶಿದ್ದುಪಡಿ ವಿಧೇಯಕವನ್ನು ಈಗ ತೆಗೆದುಕೊಂಡು, ಮುಗಿಸಿ ಅನಂತರ ಉಳಿದ ಕಾರ್ಯಕಲಾಪಗಳನ್ನು ನಾವು ತೆಗೆದುಕೊಳ್ಳಬಹುದು. ಇದು ತಾಂತ್ರಿಕವಾಗಿ ಬಹಳ ಮಹತ್ವವಾಗಿರದೇ ಇದ್ದರೂ ಕೂಡ ಬಹಳ ಪ್ರಾಮುಖ್ಯವಾದ ತಿದ್ದುಪಡಿ.

ಶಾಸನ ರಚನಾ ಕಾರ್ಯಕಲಾಪಗಳು

೧೯೪೯ನೇ ಇಸವಿಯ ಕರ್ನಾಟಕ ಸ್ಥಳೀಯ ಸ್ಥಂಸ್ಥೆಗಳ ಕಾನೂನು (ತಿದ್ದುಪಡಿ)

ವಿಧೇಯಕ (ಅಂಗೀಕೃತವಾಯಿತು)

೧೯೪೯ನೇ ಇಸವಿಯ ಕರ್ನಾಟಕ ಸ್ಥಳೀಯ ಸಂಸ್ಥೆಗಳ ಕಾನೂನು (ತಿದ್ದುಪಡಿ) ವಿಧೇಯಕ

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಂ. ವೀರಪ್ಪ ಮೊಯಿಲಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ವಾರ್ತಾ ಸಚಿವರು).—

ಮಾನ್ಯ ಅಧ್ಯಕ್ಷರೇ, ಪ್ರಸ್ತಾವ ಏನೆಂದರೆ,

"೧೯೪೯ನೇ ಇಸವಿಯ ಕರ್ನಾಟಕ ಸ್ಥಳೀಯ ಸಂಸ್ಥೆಗಳ ಕಾನೂನು (ತಿದ್ದುಪಡಿ) ವಿಧೇಯಕವನ್ನು ಈ ಸಭೆಯು ಪರ್ಯಾಲೋಚಿಸಬೇಕೆಂದು ಕೋರಿಂತ್ತೇನೆ".

ಪ್ರಸ್ತಾವವನ್ನು ಮಂಡಿಸಲಾಯಿತು,

† ಶ್ರೀ ಎಂ. ವೀರಪ್ಪ ಮೊಯಿಲಿ.—ಸನ್ಮಾನ್ಯ ಅಧ್ಯಕ್ಷರೇ, ಈ ಯಾವ ಒಂದು ಮಸೂದೆ ಇದೆ ಇದರಲ್ಲಿ ಎರಡು ಭಾಗ ಇದೆ. ಒಂದನೆಯದು ಮತದಾರರ ಪಟ್ಟಿ ಏನು ಇದೆ ಇದರಲ್ಲಿ, ಮುನಿಸಿಪಲ್ ಆಕ್ಟ್, ಕಾರ್ಪೊರೇಷನ್ ಆಕ್ಟ್ ಮತ್ತು ಜಿಲ್ಲಾ ಪರಿಷತ್ ಕಾನೂನಿನ ಪ್ರಕಾರ ೧೮ ವರ್ಷಕ್ಕೆ ಮೇಲ್ಪಟ್ಟವರನ್ನು ಇದರಲ್ಲಿ ಸೇರಿಸಬೇಕೆಂದು ಇವೆ. ಈ ಮೂರು ವಿಧೇಯಕಗಳಲ್ಲೂ, ಈ ಒಂದು ಕಾನೂನು ಇದೆ. ಆದರೆ ತಮಗೆ ಗೊತ್ತಿರುವಹಾಗೆ ಅನಂತರ ಸಂವಿಧಾನ ತಿದ್ದುಪಡಿ ಆದಮೇಲೆ ರೆಪ್ರೆಸೆಂಟೇಷನ್ ಆಫ್ ಪೀಪಲ್ ಆಕ್ಟ್ ಪ್ರಕಾರ ೧೮ ವರ್ಷಕ್ಕೆ ಮೇಲ್ಪಟ್ಟವರನ್ನು ಕೂಡಾ ಮತದಾರರ ಪಟ್ಟಿಯಲ್ಲಿ ಸೇರಿಸಬೇಕೆಂದು ಮೊನ್ನೆ ನಡೆದ ಚುನಾವಣೆಯಲ್ಲಿ ಸೇರಿಸಿದ ಕಾರಣ, ಇದರ ಬಗ್ಗೆ ಯಾವ ಒಂದು ಈ ಮೂರು ವಿಧೇಯಕಗಳಲ್ಲಿ ಈ ಪ್ರಾವಿಜನ್ ಇದೆ, ಅದು ಬೇಕಾಗಿಲ್ಲ. ಇಲ್ಲದಿದ್ದರೆ ಏನಾಗುತ್ತದೆ ಎಂದರೆ ಚುನಾವಣಾ ಕಾಲದಲ್ಲಿ ಅನಾವಶ್ಯಕವಾದಂಥ ಪದ್ಧತಿಯನ್ನು ನಾವು ಅನುಸರಿಸಬೇಕಾದಂಥ, ಪರಿಸ್ಥಿತಿ ಬರುತ್ತದೆ. ಆದುದರಿಂದ ಈ ಒಂದು ಮುನಿಸಿಪಲ್, ಕಾರ್ಪೊರೇಷನ್ ಮತ್ತು

ಜಿಲ್ಲಾ ಪರಿಷತ್ ಆಕ್ಟ್‌ನಲ್ಲಿ ಈ ಒಂದು ಭಾಗ ಏನಿದೆ ಅದನ್ನು ತೆಗೆದುಹಾಕಬೇಕೆಂಬುದು ಒಂದು ಭಾಗ. ಎರಡನೆಯ ಭಾಗ ಎಂದು ಹೇಳಿದರೆ ಹಿಂದಿನ ಸರಕಾರ, ಇದೇ ಒಂದು ವಿಧಾನಸಭೆಯಲ್ಲಿ, ಕಾರ್ಪೊರೇಷನ್ಸ್‌ಗೆ ಐದು ವರ್ಷ ಅವಧಿ ಇದೆ, ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳಿಗೆ ಐದು ವರ್ಷ ಅವಧಿ ಇದೆ, ಆದರೆ ಮುನಿಸಿಪಾಲಿಟೀಸ್ ಆಕ್ಟ್‌ನಲ್ಲಿ ನಾಲ್ಕು ವರ್ಷ ಮಾತ್ರ ಇದೆ ಎಂದು, ಅದಕ್ಕೆ ತಿದ್ದು ಪಡಿ ಮಾಡಿ, ಮುನಿಸಿಪಾಲಿಟೀಸ್ ಆಕ್ಟ್‌ನಲ್ಲಿ ಕೂಡಾ ಈ ಅವಧಿಯನ್ನು ನಾಲ್ಕು ವರ್ಷದಿಂದ ಐದು ವರ್ಷಕ್ಕೆ ಏರಿಸಬೇಕೆಂದು ಹೇಳಿ, ಒಂದು ಮಸೂದೆಯನ್ನು ಇಲ್ಲಿ ಇಟ್ಟಿದ್ದರು. ಆ ಮಸೂದೆ ಲ್ಯಾಪ್ಸ್ ಆಗಿಹೋಯಿತು. ಈಗ ಅದನ್ನೇ ತರಬೇಕೆಂದು ಹೇಳಿ ಹೊರಟಿದ್ದೀವೆ. ಚುನಾವಣೆ ಮಾಡುವಾಗ ಎಲ್ಲರಿಗೂ ಕೂಡಾ ಒಂದು ಸರಿಸಮಾನವಾದ ಅವಧಿ ಇದರಿಂದ ಸಿಗಲಿಕ್ಕೆ ಸಾಧ್ಯ ಇದೆ. ಈ ಎರಡು ವಿಚಾರದಲ್ಲಿ ತಿದ್ದುಪಡಿ ತಂದಿದ್ದೇವೆ. ಬಹುಶಃ ಈ ತಿದ್ದುಪಡಿಯಲ್ಲಿ ಆಕ್ಷೇಪಾರ್ಹವಾದುದು ಏನೂ ಇಲ್ಲ, ಇದು ಚರ್ಚೆಸಬೇಕಾದ ಮಸೂದೆ ಅಲ್ಲ ಎಂದು ತಿಳಿದುಕೊಂಡು ಇದಕ್ಕೆ ತಮ್ಮ ಒಪ್ಪಿಗೆಯನ್ನು ಕೊಡಬೇಕೆಂದು ಅಧ್ಯಕ್ಷರ ಮುಖಾಂತರ ಮಾನ್ಯ ಸದಸ್ಯರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ —ಸನ್ಮಾನ್ಯ ಅಧ್ಯಕ್ಷರೆ, ಈಗೇನು ತಾವು ಈ ಒಂದು ತಿದ್ದುಪಡಿಯನ್ನು ತಂದಿದ್ದೀರಿ ಇದರಲ್ಲಿ ಚರ್ಚೆ ಮಾಡುವಂತಹ ಅವಕಾಶಗಳು ಜಾಸ್ತಿ ಎಂದು ನನಗೆ ಅನ್ನಿಸುವುದಿಲ್ಲ. ಪ್ರಮುಖವಾದ ವಿಚಾರ ಎಂದರೆ, ಸ್ವಾಗತ ಮಾಡುವಂತಹ ಸಂಗತಿ ಎಂದರೆ, ಪುರಸಭೆ ನಗರಸಭೆ ಮತ್ತು ಮಹಾನಗರಸಭೆಗಳಿಗೆ ತಾವು ಚುನಾವಣೆಗಳನ್ನು ಮಾಡಬೇಕೆಂದು ತಾವು ಹೊರಟಿದ್ದೀರಿ. ಇದನ್ನೂ ನಾವು ಸ್ವಾಗತ ಮಾಡುತ್ತೇವೆ.

ಅಧ್ಯಕ್ಷರು.—ತಾವು ಇದರ ಮೇಲಿನ ಚರ್ಚೆಯಲ್ಲಿ ಭಾಗವಹಿಸುತ್ತಿದ್ದೀರಾ ? ನಾನು ನಿಮ್ಮನ್ನು, ಕರೆದೇ ಇಲ್ಲವಲ್ಲ. ಈಗ ವಿರೋಧ ಪಕ್ಷದ ನಾಯಕರು. ದೇಶಪಾಂಡೆಯವರು ಮಾತನಾಡಬಹುದು.

† ಶ್ರೀ ಆರ್. ವಿ. ದೇಶಪಾಂಡೆ (ಹಳಿಯಾಳ).—ಮಾನ್ಯ ಅಧ್ಯಕ್ಷರೇ, ಈ ತಿದ್ದುಪಡಿ ಏನು ತಂದಿದ್ದಾರೆ ಇದನ್ನು ಸ್ವಾಗತ ಮಾಡುತ್ತೇವೆ. ಇದರ ಅವಶ್ಯಕತೆ ಇದೆ, ಆದರೆ ಇವತ್ತು ಇದಕ್ಕೆ ಮುಂಚೆ ಕೆಲವು ವಿಚಾರಗಳನ್ನು ಸರಕಾರ ಗಮನಕ್ಕೆ ತೆಗೆದುಕೊಳ್ಳಬೇಕಾಗುತ್ತದೆ, ಈಗಾಗಲೇ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ನಗರ ಸಭೆ ಮತ್ತು ಕಾರ್ಪೊರೇಷನ್‌ಗಳಿಗೆ ಚುನಾವಣೆಗಳನ್ನು ಮಾಡುತ್ತೇವೆ ಎಂದು ಹೇಳಿದ್ದೀರಿ. ಇದು ಬಹಳ ಸಂತೋಷ ಆಗಬಹುದು. ಇವತ್ತು ಏನಾಗಿದೆ ಎಂದರೆ, ಬಹಳಷ್ಟು ಕಾರ್ಪೊರೇಷನ್ಸ್‌ಗಳಲ್ಲಿ, ಮುನಿಸಿಪಾಲಿಟೀಸ್‌ಗಳಲ್ಲಿ ಈ ವಾರ್ಡ್ಸ್ ಮತ್ತು ಡಿವಿಜನ್ಸ್ ಏನಿವೆ ಇವುಗಳ ಬೈಫರ್ಕೇಷನ್ ಸರಿಯಾಗಿಲ್ಲ. ಅದು ದಾಂಡೇಲಿ ಇರಬಹುದು ಸವದತ್ತಿ ಇರಬಹುದು. ಈಗಾಗಲೇ ಇದರ ಬಗ್ಗೆ ಸರಕಾರಕ್ಕೆ ಪ್ರಪೋಸಲ್ ಬಂದಿದೆ. ಒಂದು ವಾರ್ಡ್‌ನಲ್ಲಿ ೧೦ ಸಾವಿರ ವೋಟರ್ಸ್ ಇದ್ದರೆ, ಅಲ್ಲಿ ಆರು ಡಿವಿಜನ್ ಇದೆ ಮತ್ತೊಂದು ಡಿವಿಜನ್‌ನಲ್ಲಿ ೫ ಸಾವಿರ ಜನ ಓಟರ್ಸ್ ಇದ್ದರೂ ಸಹ ೩ ಜನ ಚುನಾಯಿಸಿ ಬರುತ್ತಾರೆ. ಈ ಸಮಸ್ಯೆಗಳೆಲ್ಲಾ ಇವೆ. ಈ ಸಮಸ್ಯೆಗಳನ್ನು ಸರ್ಕಾರದವರು ಚುನಾವಣೆಗೆ ಮುಂಚಿತವಾಗಿ ಬದಲಾವಣೆ ಮಾಡಬೇಕು. ಇಲ್ಲದಿದ್ದರೆ ನಿಜವಾಗಿ ಚುನಾಯಿಸಿ ಬರುವಂತಹ ಜನ ಪ್ರತಿನಿಧಿಗಳಿಗೆ ಪ್ರಜಾಪ್ರಭುತ್ವದಲ್ಲಿ ಚುನಾಯಿಸಿ ಬರುವುದಕ್ಕೆ ತೊಂದರೆಯಾಗುತ್ತದೆ. ಈ ದೃಷ್ಟಿಯಿಂದ ಮಾನ್ಯ ಸಚಿವರು ಇದರ ಬಗ್ಗೆ ವಿಚಾರ ಮಾಡಬೇಕು. ಮತ್ತು ಈ ಒಂದು ಹೊಸ ತಿದ್ದುಪಡಿ ಏನು ತಂದಿದ್ದಾರೆ ಇದನ್ನು ನಾನು ಸ್ವಾಗತ ಮಾಡುತ್ತೇನೆ.

ಶ್ರೀ ಕೆ. ಬಿ. ಕೋಳಿವಾಡ್.—ಇದಕ್ಕೆ ಅಮೆಂಡ್‌ಮೆಂಟ್ ಅವಶ್ಯಕತೆ ಇಲ್ಲ.

ಶ್ರೀ ಆರ್. ವಿ. ದೇಶಪಾಂಡೆ.—ನಾನು ಸಹ ಆ ಇಲಾಖೆ ಮಂತ್ರಿಯಾಗಿ ಕೆಲಸ ಮಾಡಿದ್ದೇನೆ. ಅಮೆಂಡ್‌ಮೆಂಟ್ ಅವಶ್ಯಕತೆ ಇಲ್ಲ. ಅಮೆಂಡ್‌ಮೆಂಟ್ ಬೇಕೆಂದು ನಾನು ಹೇಳಲಿಲ್ಲ. ಇದನ್ನು ಗಮನದಲ್ಲಿ ತೆಗೆದುಕೊಳ್ಳಿ ಎಂದು ಹೇಳಿದ್ದೇನೆ. ನಾನು ಸಹ ಈ ದಿಸೆಯಲ್ಲಿ ಪ್ರಯತ್ನ ಮಾಡಿದೆನೆ. ತಾವು ಬೇಕಾದರೆ ಫೈಲ್ ನೋಡಬಹುದು. ಆಫ್ಟೇ ಅಲ್ಲ ತಾವು ೪ ವರ್ಷ ಅವಧಿಯಲ್ಲಿ ಏನೂ ಕೆಲಸ ಮಾಡುವುದಕ್ಕೆ ಆಗುವುದಿಲ್ಲವೆಂದು ಹೇಳಿ ೫ ವರ್ಷಗಳನ್ನು ಮುನಿಸಿಪಾಲಿಟಿಗಳಿಗೆ ಮಾಡುತ್ತಿದ್ದೀರಿ, ಮಾಡಿ. ಅದೇ ಪ್ರಕಾರ ಬೇರೆ ಕೆಲವು ಕಾಂಪ್ರವೆನ್ಸಿವ್ ಆಕ್ಟ್ ಇವೆ. ಅವುಗಳಿಗೂ ಸಹ ತಾವು ಅಮೆಂಡ್‌ಮೆಂಟ್ಸ್ ತರಬೇಕು. ಈಗ ಸಹಕಾರ ಸಂಘಗಳಲ್ಲಿ ಮತ್ತು ಜಿಲ್ಲಾ ಪರಿಷತ್ತಿನಲ್ಲಿ ಮಹಿಳೆಯರಿಗೆ ಪ್ರಾತಿನಿಧ್ಯ ಕೊಟ್ಟಿದ್ದೇವೆ. ಅದೇ ಪ್ರಕಾರವ ಪ್ರಾತಿನಿಧ್ಯ ಮುನಿಸಿಪಾಲಿಟಿ ಮತ್ತು ಕಾರ್ಪೊರೇಷನ್‌ಗಳಲ್ಲಿ ಸಿಗಬೇಕು. ಇದನ್ನು ಸಹ ತಾವು ಗಮನದಲ್ಲಿಟ್ಟುಕೊಳ್ಳಬೇಕು. ಈಗ ಮುನಿಸಿಪಾಲಿಟಿಗಳ ಅಧ್ಯಕ್ಷರಿಗೆ ಯಾವುದೇ ಅಧಿಕಾರ ಇಲ್ಲ. ಅವರು ಒಂದು ಸಾವಿರ ರೂಪಾಯಿಗಳನ್ನು ಖರ್ಚು ಮಾಡಬೇಕಾದರೂ ಸಹ ಜಿಲ್ಲಾಧಿಕಾರಿಗಳ ಪರವಾನಿಗೆಯನ್ನು ತೆಗೆದುಕೊಳ್ಳಬೇಕು. ಅಲ್ಲಿ ಅಧ್ಯಕ್ಷರು ಬರೀ ಪೇಪರ್ ವೈಟ್ ಗರ್ಸ್ ಮಾತ್ರ. ಬೊಂಬಾಯಿ ಮುನಿಸಿಪಾಲಿಟಿ ಆಕ್ಟ್ ಇದೆ ಅದರ ಪ್ರಕಾರ ಮಾಡಿದರೆ ಸಾಕಷ್ಟು ಅನುಕೂಲವಾಗುತ್ತದೆ. ಆ ರೀತಿ ಮಾಡಿದರೆ ಅಧಿಕಾರ ವಿಕೇಂದ್ರೀಕರಣ

ಆಗುತ್ತದೆ. ಅಧಿಕಾರ ವಿಕೇಂದ್ರೀಕರಣದಲ್ಲಿ ವಿಶ್ವಾಸವಿದ್ದರೆ ಜನರ ಪ್ರತಿನಿಧಿಗಳಿಗೆ ನೀವು ಅಧಿಕಾರ ಕೊಡಬೇಕೆನ್ನುವುದಾದರೆ ಜನ ಪ್ರತಿನಿಧಿಗಳಿಂದ ಒಳ್ಳೆಯ ಕೆಲಸ ನಡೆಯಬೇಕೆಂದು ಆದರೆ ಈ ಸಮಯದಲ್ಲಿ ಇದನ್ನು ನೀವು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಆಗ ತಾವು ಒಂದು ಕಾಂಪ್ರಮೈಸ್ ಅಮೆಂಡ್‌ಮೆಂಟ್ ತರಬೇಕಾಗುತ್ತದೆ. ಇವೊತ್ತು ಈ ಮುನಿಸಿಪಾಲಿಟಿಗಳ ಆಕ್ಟ್‌ಗೆ ಅಮೆಂಡ್‌ಮೆಂಟ್ ತರಬೇಕಾಗುತ್ತದೆ. ಅದೇ ಪ್ರಕಾರ ಕಾರ್ಪೊರೇಷನ್ ಆಕ್ಟ್‌ಗೆ ಅಮೆಂಡ್‌ಮೆಂಟ್ ತರಬೇಕಾಗುತ್ತದೆ. ಕಾರ್ಪೊರೇಷನ್ ಆಕ್ಟ್‌ಗೆ ಅಮೆಂಡ್‌ಮೆಂಟ್ ತರುವುದಕ್ಕೆ ಸ್ವಲ್ಪ ವಿವಾದ ಇದೆ. ಅದೇನೆಂದರೆ ಮೇಯರ್ ಅವಧಿ ಒಂದು ವರ್ಷ ಮಾತ್ರ ಇದೆ. ಅದನ್ನು ಐದು ವರ್ಷಗಳಿಗೆ ಮಾಡಬೇಕು. ಇಲ್ಲದಿದ್ದರೆ ಒಂದೊಂದು ವರ್ಷದಲ್ಲಿ ಮೇಯರ್ ಆಗಿ ಬಂದವರು ಸಭೆ ಸಮಾರಂಭಗಳಲ್ಲಿ ಭಾಗವಹಿಸುವಷ್ಟರಲ್ಲಿ ಅವರ ಅವಧಿ ಮುಗಿದು ಹೋಗುತ್ತದೆ. ಇನ್ನು ಅವರು ಅಭಿವೃದ್ಧಿ ಕೆಲಸ ಕಾರ್ಯಗಳು ಮಾಡುವುದು ಯಾವಾಗ ? ಆದ್ದರಿಂದ ನಾನು ಮೊದಲೇ ಹೇಳಿದಹಾಗೆ ಕಾರ್ಪೊರೇಷನ್ ಆಕ್ಟ್ ಮತ್ತು ಮುನಿಸಿಪಾಲಿಟಿ ಆಕ್ಟ್‌ಗಳಿಗೆ ಅಮೆಂಡ್‌ಮೆಂಟ್ಸ್ ತರಬೇಕಾಗುತ್ತದೆ. ಈ ಬಗ್ಗೆ ಈಗಾಗಲೇ ಸಾಕಷ್ಟು ಸೂಚನೆಗಳು ಬಂದಿವೆ. ಇದರ ಬಗ್ಗೆ ಒಂದು ಕಡತ ಸಹ ತಯಾರಾಗಿದೆ. ತಾವು ಅದನ್ನು ಪರಿಶೀಲನೆ ಮಾಡಬಹುದು. ಆದಷ್ಟು ಬೇಗ ಈ ಕೆಲಸ ಮಾಡಿ. ಚುನಾವಣೆ ಮುಂಚಿತವಾಗಿ ಹೆಣ್ಣು ಮಕ್ಕಳಿಗೆ ಪ್ರಾತಿನಿಧ್ಯವನ್ನು ಕೊಡುವ ಬಗ್ಗೆ ಸಹ ಪರಿಶೀಲನೆ ಮಾಡಬೇಕು. ಮಂತ್ರಿ ಈಗ ಏನು ಒಂದು ತಿದ್ದುಪಡಿಯನ್ನು ಸರ್ಕಾರದವರು ತಂದಿದ್ದಾರೆ ಅದನ್ನು ನಾನು ಸ್ವಾಗತ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ಎಸ್. ಯಡಿಯೂರಪ್ಪ.—ಸನ್ಮಾನ್ಯ ಅಧ್ಯಕ್ಷರೇ ನನಗೊಂದು ಸಂಶಯ. ಈಗಾಗಲೇ ಕೇಂದ್ರ ಸರ್ಕಾರ ೧೮ ವರ್ಷದ ವಯೋಮಿತಿ ಇರುವವರಿಗೆ ಮತದಾನದ ಹಕ್ಕು ಕೊಟ್ಟ ಮೇಲೆ ಇದಕ್ಕೆ ಪುನಃ ರಾಜ್ಯ ಸರ್ಕಾರದವರು ಅಮೆಂಡ್‌ಮೆಂಟ್ ತರುವಂಥ ಅವಶ್ಯಕತೆ ಇಲ್ಲವೆಂದು ನನಗನಿಸುತ್ತದೆ. ೧೮ ವರ್ಷಕ್ಕೆ ಮತದಾನದ ಹಕ್ಕನ್ನು ಕೇಂದ್ರ ಸರ್ಕಾರದವರು ಪೀಪಲ್ಸ್ ರೆಪ್ರಜಂಟೇಷನ್ ಆಕ್ಟ್ ಪ್ರಕಾರ ಕೊಟ್ಟಿದ್ದಾರೆ. ಇದರ ಅಗತ್ಯ ಇತ್ತೇ ? ಇನ್ನು ಎರಡನೆಯದಾಗಿ ನಮ್ಮ ಮಾಜಿ ಸಚಿವರಾದ ದೇಶಪಾಂಡೆಯವರು ಒಂದು ಸಲಹೆ ಕೊಟ್ಟರು ಅದೇನೆಂದರೆ ಪುರಸಭೆ ಮಂತ್ತು ನಗರಸಭೆಗಳಿಗೆ ೫ ವರ್ಷದವರೆಗೆ ಅಧ್ಯಕ್ಷರು ಇರುವ ಅವಶ್ಯಕತೆ ಇದೆ ಅದನ್ನು ಮಾಡಿ ಎಂದು.ಆ ಸಲಹೆ ಸಂದರ್ಭೋಚಿತ ಮತ್ತು ಅಗತ್ಯವೆಂದು ನನಗನ್ನಿಸುತ್ತದೆ. ಕಾರ್ಪೊರೇಷನ್ಸ್‌ಗಳಲ್ಲಿ ಮೇಯರ್ಸ್ ಅವಧಿ ಒಂದು ವರ್ಷವೆಂದು ಮಾಡಿರುವುದರಿಂದ ಕಾರ್ಪೊರೇಷನ್ಸ್‌ಗಳಲ್ಲಿ ಆಗಾಗ ಗೊಂದಲ ಸೃಷ್ಟಿಯಾಗಿ ಬಿಡುತ್ತದೆ. ಇದನ್ನು ತಪ್ಪಿಸಲು ಮತ್ತು ನಗರಸಭೆ ಆಡಳಿತದ ದೃಷ್ಟಿಯಿಂದ ಅಧ್ಯಕ್ಷರ ಅವಧಿಯನ್ನು ಪ್ರತಿ ವರ್ಷ ಬದಲಾವಣೆ ಮಾಡುವುದರಿಂದ ರಾಜಕೀಯ ಗೊಂದಲ ಸೃಷ್ಟಿಯಾಗುತ್ತದೆ. ರಾಜಕೀಯ ಪಕ್ಷಗಳಲ್ಲಿ ಗೊಂದಲ ಸೃಷ್ಟಿಯಾಗುತ್ತದೆ. ತಾವು ಕಾನೂನು ಪ್ರಕಾರ ೫ ವರ್ಷ ಮಾಡಿ ತಮಗೆ ಬೇಕಾದವರನ್ನು ಚುನಾಯಿಸಿಕೊಂಡರೂ ಸಹ ಅದಕ್ಕೆ ಯಾರೂ ಅಡ್ಡಿ ಬರುವುದಿಲ್ಲ.

ಆದ್ದರಿಂದ ನಾನು ವಿನಂತಿ ಮಾಡಿಕೊಳ್ಳುವುದು, ನೀವು ಆಮೂಲಗ್ರವಾಗಿ ಒಂದು ಅಮೆಂಡ್‌ಮೆಂಟ್ ತಂದಿದ್ದೀರಿ. ಇದು ಸ್ವಲ್ಪ ಅವಸರವಾಗಿ ತಂದಿರುವಂತೆದ್ದಾಗಿದೆ. ನಾನು ತಮ್ಮಲ್ಲಿ ಅಧ್ಯಕ್ಷರ ಮೂಲಕ ವಿನಂತಿ ಮಾಡಿಕೊಳ್ಳುವುದೆಂದರೆ, ಒಳ್ಳೆಯ ಆಡಳಿತವನ್ನು ಕಾರ್ಪೊರೇಷನ್‌ಗೆ ಕೊಡುವ ದೃಷ್ಟಿಯಿಂದ ಈ ರೀತಿ ಒಂದು ವರ್ಷ ನಿಗದಿ ಮಾಡಿ ರಾಜಕೀಯ ಗೊಂದಲಕ್ಕೆ ಅವಕಾಶ ಮಾಡಿಕೊಟ್ಟಿರುವುದನ್ನು ತಪ್ಪಿಸಬೇಕಾಗುತ್ತದೆ. ಒಂದು ವೇಳೆ ಹುಬ್ಬಳ್ಳಿ, ಧಾರವಾಡದಲ್ಲಿ ಬಿ.ಜೆ.ಪಿ. ಪಕ್ಷ ಅಧಿಕಾರಕ್ಕೆ ಬಂದರೆ, ನಾವು ಅಧಿಕಾರದಲ್ಲಿರಬೇಕೆಂದು ಅಪೇಕ್ಷೆ ಇದೆ. ಆದರೆ ಒಬ್ಬನೇ ೫-೫ ವರ್ಷಗಳ ಕಾಲ ಮೇಯರ್ ಕೆಲಸ ಮಾಡಬೇಕೆಂದು ನಮಗೆ ಅಪೇಕ್ಷೆ ಇರುತ್ತದೆ. ಆವಾಗ ನಮ್ಮಲ್ಲಿ ಕಚ್ಚಾಟಕ್ಕೆ ನಾವೇ ಅವಕಾಶ ಮಾಡಿಕೊಟ್ಟಂತಾಯಿತು. ಎಲ್ಲರನ್ನೂ ತೃಪ್ತಿ ಪಡಿಸುವುದು ಎಲ್ಲಾ ರಾಜಕೀಯ ಪಕ್ಷದಲ್ಲಿರುವ ಸಹಜ ಗೊಂದಲ. ಅದನ್ನೆಲ್ಲಾ ಸೇರಿಸಿ ತಾವು ಒಂದು ಅಮೆಂಡ್‌ಮೆಂಟನ್ನು ತರುವಂಥಾದ್ದು ಅಗತ್ಯ ಇದೆ ಇನ್ನೊಂದೆಂದು ಪುರಸಭೆ ನಗರಸಭೆ ಮಹಾ ನಗರಗಳ-ಸಭೆಗಳ ಚುನಾವಣೆಗಳನ್ನು ನಾವು ಸ್ವಾಗತ ಮಾಡುತ್ತೇವೆ. ಒಂದು ಮಾತು ಹೇಳುವಂಥಾದ್ದು ಎಂದರೆ ಚುನಾವಣೆ ಮಾಡಬೇಕು. ಚುನಾವಣೆಯಲ್ಲಿ ಅತ್ಯಂತ ಹೆಚ್ಚಿನ ಬಹುಮತದಿಂದ ನೀವು ಗೆದ್ದಿದ್ದೀರಿ. ಈ ಪರಿಸ್ಥಿತಿಯಲ್ಲಿ ಚುನಾವಣೆ ಮಾಡಿ ನೀವು ಅಧಿಕಾರಕ್ಕೆ ಬರಬೇಕೆಂದು ತಾವು ಯೋಚನೆ ಮಾಡಿದ್ದಿರಿ. ಚುನಾವಣಾ ಸಮಯದಲ್ಲಿ ನಾನು ರಾಜ್ಯದಲ್ಲಿ ಪ್ರವಾಸ ಮಾಡಿದಾಗ ಕಂಡುಬಂದದ್ದು ಎಂದರೆ, ಸಾವಿರಾರು ಸಂಖ್ಯೆಯಲ್ಲಿ, ಅಂದರೆ ಒಂದೊಂದು ವಿರಿಯಾದಲ್ಲೇ ಚುನಾವಣೆ ಸಮಯದಲ್ಲಿ ಮತದಾರರು ಓಟ್ರು ಗಳು ಸೇರಿಲ್ಲ. ಇದಕ್ಕೆ ನೂರಾರು ಉದಾಹರಣೆಗಳನ್ನು ಕೊಡುತ್ತೇನೆ. ಇಂಥಾ ನೂರಾರು ಪ್ರಕರಣಗಳು ಇವೆ. ಬರೀ ಎರಡು ಮೂರು ಸಂಗತಿಗಳಲ್ಲ. ಇದರ ಬಗ್ಗೆ ಎಲೆಕ್ಷನ್ ಪೀಟೀಷನ್

ಹಾಕೋಣ ಎಂದರೆ ೧೦-೧೨ ಸಾವಿರ ಮತಗಳ ಅಂತರದಲ್ಲಿ ಗೆದ್ದಿದ್ದಾರೆ. ಸಾವಿರಾರು ಮತದಾರರು ಹೆಸರುಗಳು ಸೇರಿಲ್ಲ. ಎಲ್ಲಾ ಅಧಿಕಾರಿಗಳ ತಪ್ಪಿನಿಂದ ಕೈಬಿಟ್ಟು ಹೋಗಿವೆ. ಚುನಾವಣೆ ಆಗುವು ದಕ್ಕಿಂತ ಮುಂಚೆ ಮತದಾರರ ಪಟ್ಟಿಯನ್ನು ಪರಿಷ್ಕರಣೆ ಮಾಡಿ. ಇಲ್ಲದಿದ್ದರೆ ನಮಗೆ ತುಂಬಾ ಕಷ್ಟವಾಗುತ್ತದೆ. ಸಮಯದ ಅಭಾವ ಬೇರೆ ಇದೆ. ನನಗೆ ಗೊತ್ತಿದೆ. ಪೀಪಲ್ಸ್ ರಿಪ್ರೆಸೆಂಟೇಟೀವ್ ಆ್ಯಕ್ಟ್ ಪ್ರಕಾರ ವರ್ಷದ ೩೬೫ ದಿವಸವೂ ಮತದಾರರು ತಮ್ಮ ಹೆಸರುಗಳನ್ನು ನೋಂದಾಯಿಸಿ ಕೊಳ್ಳುವ ಅವಕಾಶ ಇದೆ. ಚುನಾವಣಾ ಹಿನ್ನೆಲೆಯಲ್ಲಿ ಒಂದು ಸಾರಿ ಈ ರೀತಿಯ ತಪ್ಪುಗಳನ್ನು ಸರಿ ಮಾಡಿ. ಇಲ್ಲದಿದ್ದರೆ ಮತ್ತೊಮ್ಮೆ ಅದೇ ತಪ್ಪು ಮಾಡಿದ ಹಾಗೆ ಆಗುತ್ತದೆ. ತಪ್ಪುಗಳನ್ನು ಸರಿ ಪಡಿಸುವ ದೃಷ್ಟಿಯಿಂದ ಮತದಾರರ ಪಟ್ಟಿಯನ್ನು ಪರಿಷ್ಕರಣೆ ಮಾಡಿ ಚುನಾವಣೆ ಮಾಡುವಂಥಾದ್ದು ತುಂಬಾ ಅಗತ್ಯ ಇದೆ. ಮತ್ತೊಂದು ಡೀ ಲಿಮಿಟೇಷನ್ ಬಗ್ಗೆ ಮಾನ್ಯ ದೇಶಪಾಂಡೆಯವರು ಮಾತನಾಡಿದರು. ಗುಲ್ಬರ್ಗಾದಲ್ಲಿ ಏನಾಗಿದೆ ಎಂದರೆ, ಅಲ್ಲಿನ ಕಾರ್ಪೊರೇಷನ್ ವಿರಿಯಾದಲ್ಲಿ ೩ ಸಾವಿರ ಜನ ಮತದಾರರಿಗೆ ಒಬ್ಬ ಪ್ರತಿನಿಧಿ ಇದ್ದರೆ, ಇನ್ನೊಂದು ಕಡೆ ೨೫ ರಿಂದ ೩೦ ಸಾವಿರ ಜನಕ್ಕೆ ಒಬ್ಬ ಪ್ರತಿನಿಧಿ ಇದ್ದಾರೆ, ಇದು ಗೊಂದಲ. ಇದನ್ನು ಸರಿಪಡಿಸಬೇಕು. ಹಿಂದೆ ಇದ್ದ ಸರ್ಕಾರ ಇದನ್ನು ಸರಿಮಾಡುವುದಕ್ಕೆ ಪ್ರಯತ್ನ ಮಾಡಲಿಲ್ಲ.

ಶ್ರೀ ಎ.ಎಂ. ಹಿಂಡಸಗೇರಿ.— ಗುಲ್ಬರ್ಗಾ ಜಿಲ್ಲೆ ಒಂದರಲ್ಲೇ ಈ ರೀತಿ ಆಗಿಲ್ಲ ಎಲ್ಲಾ ಜಿಲ್ಲೆಗಳಲ್ಲೂ ಆಗಿದೆ. ಒಂದು ಕಡೆ ೨ ಸಾವಿರ ಜನಕ್ಕೆ ಒಬ್ಬ ಪ್ರತಿನಿಧಿ ಇದ್ದರೆ ಇನ್ನೊಂದು ಕಡೆ ೧೫ ಸಾವಿರ ಜನಕ್ಕೆ ಒಬ್ಬ ಪ್ರತಿನಿಧಿ ಇದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ.— ಈ ಕಡೆ ಕುಳಿತುಕೊಂಡಿರುವವರ ಸರ್ಕಾರದ ಕೃಪಾಕಟಾಕ್ಷ ದಿಂದಲೂ ಈ ಗೊಂದಲ ಉಂಟಾಗಿದೆ ಅದಕ್ಕೋಸ್ಕರ ಪುರಸಭೆ, ನಗರಸಭೆ ಮಹಾನಗರಸಭೆಗಳ ಚುನಾವಣೆಯಲ್ಲಿ ಅನೇಕ ಲೋಪದೋಷಗಳು ಇವೆ. ಅವುಗಳನ್ನು ಸರಿಪಡಿಸಿ. ಹಿಂದೆ ಇದ್ದವರಿಗೆ ಲೋಪದೋಷಗಳನ್ನು ಸರಿಪಡಿಸುವುದಕ್ಕಾಗಲಿಲ್ಲ.

ಶ್ರೀ ಕಾಗೊಡುತಿಮ್ಮಪ್ಪ.— ಸಿದ್ದಾಪುರ ತಾಲ್ಲೂಕಿನಲ್ಲಿ ಜಿಲ್ಲಾಪರಿಷತ್ತುಗಳಿಗೆ ಕ್ಷೇತ್ರಗಳನ್ನು ಹಿಂದಿನ ಸರ್ಕಾರದವರು ವಿಂಗಡನೆ ಮಾಡಿದ್ದಾರೆ. ಅದನ್ನು ನೋಡಿದರೆ ತಿಳಿಯುತ್ತದೆ.

ಶ್ರೀ ಆರ್.ವಿ ದೇಶಪಾಂಡೆ.— ತಪ್ಪುಗಳಾಗಲಿ ಎಂದು ನಾವು ವಿಂಗಡಣೆ ಮಾಡಿಲ್ಲ. ಏನಾದರೂ ತಪ್ಪುಗಳಾಗಿದ್ದರೆ ಈಗಲೂ ಅದನ್ನು ಸರಿಪಡಿಸುತ್ತೇವೆ. ನಾವು ಅನ್ಯಾಯ ಮಾಡಲಿಕ್ಕೆ ಹೋಗಿಲ್ಲ. ಆ ಬುದ್ಧಿ ನಮಗೆ ದೇವರು ಕೊಟ್ಟಿಲ್ಲ. ನಿಮಗೆ ಆ ಬುದ್ಧಿ ಇದೆ.

ಶ್ರೀ ಬಿ. ಎಸ್. ಯಡಿಯೂರಪ್ಪ.— ಸನ್ಮಾನ್ಯ ಅಧ್ಯಕ್ಷರೇ ನಾನು ಹೇಳುತ್ತಿರುವಂಥಾದ್ದು, ಅಧಿಕಾರದಲ್ಲಿಕುಳಿತಂಥ ಇಲ್ಲಿರುವಂಥ ಜನಕ್ಕೆ ಆವರೆದೇ ಆದ ಅನೇಕ ಗೊಂದಲದಲ್ಲಿ ಅವರು ಮುಳುಗಿ ಹೋಗಿದ್ದರು. ಕೆಲಸ ಮಾಡಬೇಕೆಂದು ಬೊಮ್ಮಾಯಿಯವರು ಅಧಿಕಾರದಲ್ಲಿ ಬಂದಾಗಲೂ ಸಹ ಕೆಲಸ ಮಾಡುವುದಕ್ಕೆ ಬಿಡಲಿಲ್ಲ. ಅದರ ಪರಿಣಾಮವಾಗಿ ಅವರಿಗೆ ಜನರು ತಕ್ಕ ಪಾಠವನ್ನು ಕಲಿಸಿದ್ದಾರೆ. ಈಗ ನಾನು ಹೇಳುತ್ತೇನೆ. ಅತ್ಯಂತ ಹೆಚ್ಚಿನ ಬಹುಮತದಿಂದ ಆರಿಸಿ ಬಂದಿರತಕ್ಕ ನೀವು ಮತ್ತೊಮ್ಮೆ ಅವರು ಮಾಡಿದ ತಪ್ಪಿನ ದುರ್ಲಾಭ ಪಡೆದುಕೊಂಡು ಮತ್ತೊಮ್ಮೆ ಚುನಾವಣೆ ಹೊರಡಿಸಿದ್ದೀರಿ, ಇದಕ್ಕೆ ನಿಮಗೆ ಏನು ಹೇಳಬೇಕು ? ನನ್ನ ಪ್ರಶ್ನೆ ಇರುವುದು ಏನೆಂದರೆ, ಸನ್ಮಾನ್ಯ ಮುಖ್ಯ ಮಂತ್ರಿಗಳ ಕಳಕಳಿ ನೋಡಿದಾಗ ಬಹಳ ಸಂತೋಷವಾಯಿತು. ಅವರಿಗೆ ಕೆಲಸ ಮಾಡಬೇಕೆನ್ನುವ ಮನೋಭಾವನೆ ಇದೆ. ಆದಕ್ಕಾಗಿ ಅವರಿಗೆ ಧನ್ಯವಾದಗಳು. ಮೊನ್ನೆ ಶಿಷ್ಟಕರ ಪ್ರಶ್ನೆ ಬಂದಾಗ ಅವರು ಬಹಳ ನೊಂದು ಹೇಳಿದರು. ನಿಜವಾಗಲೂ ಅವರ ಕಳಕಳಿಗೆ ನಾನು ಅಭಿನಂದನೆ ಸಲ್ಲಿಸುತ್ತೇನೆ. ಈಗ ಪ್ರಶ್ನೆ ಇರುವುದೆಂದರೆ, ಸನ್ಮಾನ್ಯ ವೀರಪ್ಪ ಮೊಯಿಲಿಯವರಂಥ ಹಿರಿಯ ನ್ಯಾಯಕರಿಗೆ ಇವೆಲ್ಲ ಗೊತ್ತಿದೆ. ಅವರು ಈ ಕಡೆ ಕುಳಿತಿದ್ದಾಗ ಪುರಸಭೆ-ನಗರಸಭೆಗಳ ಮತ್ತು ಮಹಾನಗರ ಸಭೆಗಳ ಚುನಾವಣೆಯ ಲೋಪದೋಷಗಳ ಬಗ್ಗೆ ಮಾತನಾಡುತ್ತಿದ್ದರು. ದೈವಿಕವಾಗಿ ಅವರಿಗೆ ಒಳ್ಳೆಯ ಮುಂತ್ರಿಯ ಸ್ಥಾನ ಸಿಕ್ಕ ಸಂದರ್ಭದಲ್ಲಿ ಈ ಲೋಪದೋಷಗಳನ್ನು ಅವರು ಸರಿಪಡಿಸಬೇಕು. ಸನ್ಮಾನ್ಯ ವೀರೇಂದ್ರಪಾಟೀಲರು ಕಳೆದ ೧೮ ವರ್ಷಗಳಿಂದ ರಾಜ್ಯ ರಾಜಕಾರಣದಿಂದ ದೂರ ಇದ್ದರು. ಅನೇಕ ಲೋಪದೋಷಗಳು, ಅವರ ಕಾಲದಲ್ಲೂ ಇದ್ದಿರಬಹುದು. ಆ ಮೇಲೂ ಆಗಿರುವುದು ಇರಬಹುದು. ನಿಮ್ಮಂಥವರು ಪುರಸಭೆ, ನಗರಸಭೆ ಮತ್ತು ಮಹಾ ನಗರಸಭೆಗಳ ಚುನಾವಣೆಗಳ ಸಮಯದಲ್ಲಿ ಅನೇಕ ಅಚಾತುರ್ಯಗಳು ಆಗಿ ಹೋಗಿವೆ. ಅವುಗಳನ್ನು ಸರಿಪಡಿಸಲಿಕ್ಕೆ ಜನತಾ, ಜನತಾ ದಳದ ಸರ್ಕಾರದ ಕೈಯಲ್ಲಿ ಆಗಲಿಲ್ಲ. ಕಳೆದ ಚುನಾವಣೆಗಳಲ್ಲಿ ಅನೇಕ ಅಚಾತುರ್ಯಗಳು ನಡೆದು ಹೋಗಿವೆ ಅದನ್ನು ಹಿಂದಿನ ಸರ್ಕಾರಕ್ಕೆ ಸರಿಪಡಿಸುವುದಕ್ಕೆ ಆಗಿಲ್ಲ. ಉದಾಹರಣೆಗೆ ಶಿವಮೊಗ್ಗದ ಏನೇ ಡಿವಿಜನ್‌ನಲ್ಲಿ ೮ ಸಾವಿರ ಮತದಾರರಿಗೆ ಒಬ್ಬ ಪ್ರತಿನಿಧಿ ಇದ್ದಾರೆ. ಳನೇ ಡಿವಿಜನ್‌ನಲ್ಲಿ ೩೫ ಸಾವಿರ

ಜನರಿಗೆ ಒಬ್ಬ ಪ್ರತಿನಿಧಿ ಎಂದು ಇದೆ. ಹಿಂದೆ ಆದ ಲೋಪದೋಷಗಳ ಬಗ್ಗೆ ಹೆಚ್ಚು ಮಾತನಾಡದೆ ಮಾನ್ಯ ಸಚಿವರಾದ ಮೊಯಲಿಯವರಲ್ಲಿ ನಾನು ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ಪ್ರತಿನಿಧಿಗಳನ್ನು ಆರಿಸುವಲ್ಲಿ ಜನಸಂಖ್ಯೆಗೆ ಅನುಗುಣವಾಗಿ ಪ್ರತಿನಿಧಿತ್ವ ಇಲ್ಲದ ಕಡೆಗಳಲ್ಲಿ ಪ್ರತಿನಿಧಿತ್ವ ಒದಗಿಸುವುದು ಇವೇ ಮುಂತಾದ ಲೋಪದೋಷಗಳು ಏನಾಗಿವೆ ಅವುಗಳನ್ನು ಸರಿಪಡಿಸುವಲ್ಲಿ ನೀವು ಮುಂದಾಗಬೇಕು ಎಂದು ಜನತೆಗೆ ಭರವಸೆ ಕೊಡುತ್ತೀರಾ ? ಸಾಮಾನ್ಯವಾಗಿ ೫ ಸಾವಿರ ಜನರ ಯೋಗಕ್ಷೇಮವನ್ನು ಒಬ್ಬ ಪ್ರತಿನಿಧಿ ನೋಡಿಕೊಳ್ಳಬಹುದು. ಆದರೆ ೩೫ ಸಾವಿರ ಜನರ ಯೋಗಕ್ಷೇಮವನ್ನು ಒಬ್ಬ ನೋಡಿಕೊಳ್ಳಲು ಸಾಧ್ಯವೆ ? ಸೀಮಿತ ಪ್ರದೇಶದಲ್ಲಿದ್ದು ಜನರ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಸಾಧ್ಯವಾಗುತ್ತದೆ. ಈಗ ತಾವುಗಳು ತಿದ್ದುಪಡಿಯನ್ನು ಏನು ತಂದಿದ್ದೀರಿ. ಅದಕ್ಕೆ ನಾವುಗಳು ವಿರೋಧ ಮಾಡುವ ಸಂದರ್ಭವೇ ಇಲ್ಲ. ಚರ್ಚೆ ಇಲ್ಲದೇ ಪಾಸ್ ಮಾಡುವಂಥ ಒಂದು ಸಂದರ್ಭವು ಈಗ ತಮಗೆ ಬಹುಮತದ ಮೂಲಕ ಇದೆ. ಆದರೆ ಈವೊತ್ತಿನ ರಾಜಕೀಯ ಪರಿಸ್ಥಿತಿಯ ಲಾಭವನ್ನು ಪಡೆದುಕೊಂಡು ಪುರಸಭೆ, ನಗರಪಾಲಿಕೆಗಳ ಚುನಾವಣೆಯನ್ನು ಹೇಗೋ ಮಾಡಿಕೊಂಡು ಹೋದರೆ ಅದು ಸರಿಯಾಗಲಿಕ್ಕಿಲ್ಲ. ಆದರಲ್ಲಿರುವ ಲೋಪದೋಷಗಳನ್ನು ಕಂಡುಕೊಂಡು ಮೊದಲು ಅವುಗಳನ್ನು ತಿದ್ದಿಕೊಂಡು ಆ ಮೇಲೆ ಚುನಾವಣೆಯನ್ನು ನಡೆಸಬೇಕು. ಇಲ್ಲದಿದ್ದರೆ ಹಿಂದಿನ ಸರಕಾರದವರು ಏನು ತಪ್ಪು ಮಾಡಿದ್ದರೋ ಅದೇ ತಪ್ಪನ್ನು ನೀವೂ ಕೂಡ ಮಾಡಿದ ಹಾಗೆ ಆಗುತ್ತದೆ, ಜನಹಿತ ದೃಷ್ಟಿಯ ಬಗ್ಗೆ ಕಳಕಳಿಯನ್ನು ಏನು ವ್ಯಕ್ತಪಡಿಸುತ್ತಿದ್ದೀರಿ ಅದು ಸತ್ಯವಾದಂತಾಗುವುದಿಲ್ಲ. ಆದಂದರಿಂದ ದಯವಾಡಿ ಈ ಅಮೆಂಡ್‌ಮೆಂಟ್‌ನ್ನು ಲೋಪದೋಷಗಳಿಂದ ಮುಕ್ತವಾಗಿಟ್ಟು ಮೇಲೆ ಪಾಸ್ ಮಾಡಿಕೊಳ್ಳುವುದು ಒಳ್ಳೆಯದು. ಆದುದರಿಂದ ನಾನು ಪ್ರಭಲವಾಗಿ ತಮ್ಮಲ್ಲಿ ಆಗ್ರಹ ಮಾಡಿಕೊಳ್ಳುವುದೇನೆಂದರೆ ಇನ್ನು ೧೫ ದಿವಸಗಳಲ್ಲಿಯೇ ಚುನಾವಣೆಯನ್ನು ಮಾಡುತ್ತೇವೆ ಎಂದರೂ ನಮ್ಮ ಸ್ವಾಗತ ಆದಕ್ಕಿ ಇದೆ. ಆದರೆ ದೋಷಪೂರಿತವಾದ ಮಸೂದೆಯ ಮೂಲಕ ಚುನಾವಣೆಗಳನ್ನು ಮಾಡಿದರೆ ಅದು ಜನರಿಗೆ ದ್ರೋಹ ಮಾಡಿದಂತಾಗುತ್ತದೆ.

ಇನ್ನೊಂದು ವಿಚಾರ ಅಂದರೆ ನಮ್ಮ ಕಾರ್ಪೋರೇಷನ್‌ಗಳಲ್ಲಿ ಮೇಯರ್‌ಗಳನ್ನು ಒಂದೊಂದು ವರ್ಷಕ್ಕೆ ಬದಲಾವಣೆ ಮಾಡುವುದರಿಂದ ಅನೇಕ ಗೊಂದಲಗಳಾಗಿವೆ. ಅದನ್ನು ಕೂಡ ಸರಿಪಡಿಸಬೇಕಾಗಿದೆ. ತಮಗೆ ಈವೊತ್ತಿನ ರಾಜಕೀಯ ಪರಿಸ್ಥಿತಿಯಲ್ಲಿ ಯೋಚನೆ ಮಾಡುವುದಕ್ಕೆ ಸಮಯ ಇಲ್ಲದಿರಬಹುದು. ಪುರಸಭೆ, ಮಹಾನಗರ ಸಭೆಗಳಿಗೆ ಬೇಗನೆ ಚುನಾವಣೆಗಳನ್ನು ಮಾಡಬೇಕೆಂಬ ಕಳಕಳಿಯಿಂದ ಈ ಗೊಂದಲ ಉಂಟಾಗಿರಬಹುದು. ಏನೇ ಇದ್ದರೂ ದಯಾಮಾಡಿ ಈ ಕ್ಷೇತ್ರ ನಿರ್ಧಾರ ಮಾಡುವಲ್ಲಿ ಏನು ಗೊಂದಲ ಇದೆ ಅದನ್ನು ಸರಿಪಡಿಸುವಂಥಾದ್ದು ಮತ್ತು ಕಾರ್ಪೋರೇಷನ್‌ಗೆ ಐದು ವರ್ಷಾವಧಿಗೆ ಮೇಯರ್ ಇರುವಂಥ ಅವಕಾಶವನ್ನು ಮಾಡುವಂಥಾದ್ದು ಇವುಗಳನ್ನೆಲ್ಲಿಗೊಂಡ ತಿದ್ದುಪಡಿಯನ್ನು ನಾಳೆಗೇ ತಂದರೂ ನಾವು ಪಾಸ್ ಮಾಡಿಕೊಡುತ್ತೇವೆ. ಅಷ್ಟರವರೆಗೆ ಈ ಬಿಲ್ಲನ್ನು ಪಾಸ್ ಮಾಡಬಾರದು ಎಂದು ಪ್ರಾರ್ಥಿಸಿಕೊಳ್ಳುತ್ತೇನೆ.

† ಶ್ರೀ ನಾಟಾಳ್ ನಾಗರಾಜ್ (ಚಾಮರಾಜನಗರ)—ಮಾನ್ಯ ಅಧ್ಯಕ್ಷರೆ, ಈ ತಿದ್ದುಪಡಿಯ ಜೊತೆಗೆ ಸರಕಾರಕ್ಕೆ ನಾನು ಒಂದು ಸಲಹೆಯನ್ನು ಕೊಡಬಯಸುತ್ತೇನೆ. ಈ ಪುರಸಭೆಗಳಿಗೆ ಮತ್ತು ಮಹಾ ನಗರಸಭೆಗಳಿಗೆ ಏಕಕಾಲಕ್ಕೆ ಚುನಾವಣೆಗಳನ್ನು ನಡೆಸತಕ್ಕಂಥಾದ್ದನ್ನು ಹಿಂದಿನ ಸರ್ಕಾರದವರು ನಡೆಸಿಕೊಂಡು ಬಂದಿದ್ದಾರೆ. ನನ್ನ ಸಲಹೆಯಂತೆ ಪುರಸಭೆಗಳಿಗೆ ಬೇರೆ ಸಂದರ್ಭದಲ್ಲಿ ಮತ್ತು ಮಹಾ ನಗರ ಸಭೆಗಳಿಗೆ ಬೇರೆ ಸಂದರ್ಭದಲ್ಲಿ ಅಂದರೆ ಒಂದಕ್ಕೊಂದು ಹತ್ತಿರದ ಸಮಯದಲ್ಲಿಯೇ ಚುನಾವಣೆಗಳನ್ನು ನಡೆಸಿದರೆ ಜನರಿಗೆ ಭಾಗವಹಿಸುವುದಕ್ಕೆ ಮತ್ತು ರಾಜಕೀಯ ಪಕ್ಷಗಳಿಗೂ ವ್ಯವಸ್ಥಿತವಾದ ಪ್ರಚಾರವನ್ನು ಮಾಡುವುದಕ್ಕೆ ಅನುಕೂಲವಾಗುತ್ತದೆ. ಆದುದರಿಂದ ಒಂದೇ ಸಾರಿ ಎರಡು ಚುನಾವಣೆಗಳನ್ನು ನಡೆಸತಕ್ಕಂಥಾದ್ದನ್ನು ಕೈಬಿಟ್ಟು ಬೇರೆ ಬೇರೆ ಎರಡು ಸಂದರ್ಭಗಳಲ್ಲಿ ಮಾಡಬೇಕಾದದು ನಿಮ್ಮ ಕರ್ತವ್ಯ. ಜೊತೆಗೆ ಆಡಳಿತಾಧಿಕಾರಿಗಳನ್ನು ನೇಮಕ ಮಾಡುವಂಥ ವಿಚಾರ. ಇತ್ತೀಚೆಗೆ ಇದು ರಾಜಕೀಯದ ನಿರ್ಧಾರವಾಗುತ್ತಾ ಇದೆ. ಆರು ತಿಂಗಳಿಗೆ ಒಂದು ಸಾರಿ ಆಡಳಿತಾಧಿಕಾರಿಯನ್ನು ನೇಮಕ ಮಾಡಬೇಕೆನ್ನುವಂಥಾದ್ದು ಸರಿಯಲ್ಲ. ಇದರಿಂದಾಗಿ ೬ ತಿಂಗಳಿಗೊಮ್ಮೆ ನಮಗೆ ಇಚ್ಛೆ, ಬಂದ ರೀತಿಯಲ್ಲಿ ನಾವು ಆಡಳಿತಾಧಿಕಾರಿಯನ್ನು ನೇಮಕ ಮಾಡುವಂಥ ಪರಿಪಾಠ ಆಗುತ್ತಾ ಹೋಗಿದೆ. ಇದರಿಂದಾಗಿ ತಮಗೆ ಬೇಕಾದಾಗ ಯಾವುದೇ ಪುರಸಭೆ ಮತ್ತು ನಗರಸಭೆಗಳಲ್ಲಿನ ಆಡಳಿತಾಧಿಕಾರಿಯನ್ನು ರದ್ದು ಮಾಡತಕ್ಕಂಥಾದ್ದು ಮೊದಲಿನಿಂದ ನಡೆಸುಕೊಂಡು ಬಂದಿದೆ. ಇಂಥ ಪರಿಸ್ಥಿತಿ ಉದ್ಭವವಾದರೆ ಪ್ರಜಾಪ್ರಭುತ್ವದ ತಳಹದಿಯಾದ ವಿಕೇಂದ್ರೀಕರಣವೊಂದನ್ನು ಧಿಕ್ಕರಿಸಿ ಪುರಸಭೆ ನಗರಪಾಲಿಕೆಗಳಿಗೆ ಹೆಜ್ಜೆ ಹೆಜ್ಜೆಗೂ ಆಡಳಿತಾಧಿಕಾರಿಯನ್ನು ನೇಮಿಸಲಾಗುತ್ತಿದೆ. ಇದನ್ನು

ತಪ್ಪಿಸಿ ಅಧಿಕಾರವನ್ನು ಚುನಾಯಿತ ಪ್ರತಿನಿಧಿಗಳ ಕೈಗೆ ಕೊಡದೇ ಹೋದರೆ ಚುನಾವಣೆ ಬಗ್ಗೆ ಜನಕ್ಕೆ ನಂಬಿಕೆ ಹೋಗುತ್ತದೆ ಎಂಬ ಮಾತನ್ನು ಹೇಳಬೇಕಾಗುತ್ತದೆ. ಬೆಂಗಳೂರು ಮಹಾನಗರ ಪಾಲಿಕೆಗೆ ಎಷ್ಟೊಂದು ಸಲ ಆಡಳಿತಾಧಿಕಾರಿಯನ್ನು ನೇಮಿಸಲಾಗಿದೆ? ತಮಗೆ ಯಾವಾಗ ಮತ ಬರುತ್ತದೆ ಎನಿಸುತ್ತದೆಯೇ ಆಗ ಚುನಾವಣೆ ನಡೆಸುವುದು ಇಲ್ಲದಿದ್ದರೆ ಯಾವುದೋ ಕಾರಣ ಹೇಳಿ ಚುನಾವಣೆಯನ್ನು ಮುಂದೂಡುವುದು. ಇದು ಮೈಸೂರು ನಗರಪಾಲಿಕೆಗೂ ಅನ್ವಯಿಸುತ್ತದೆ. ಈ ರೀತಿ ಗಧಾಪ್ರಹಾರ ಮಾಡುವುದು ಸರಿಯಲ್ಲ. ಇಂತಹ ಸಂಸ್ಥೆಗಳಿಗೆಲ್ಲ ಕಡ್ಡಾಯವಾಗಿ ಚುನಾವಣೆ ನಡೆಸಿ ಸಂಪೂರ್ಣ ೫ ವರ್ಷ ಕಾಲ ಆಡಳಿತ ನಡೆಸಲು ಪ್ರತಿನಿಧಿಗಳಿಗೆ ಅವಕಾಶ ಮಾಡಿಕೊಡಬೇಕು ಆಡಳಿತಾಧಿಕಾರಿ ನೇಮಕ ಕೇವಲ ರಾಜಕೀಯ ನೇಮಕವಾಗಬಾರದು.

ಪ್ರಾಮುಖ್ಯವಾದ ಮತ್ತೊಂದು ಅಂಶವೆಂದರೆ ಬೆಳಗಾವಿ ನಗರಪಾಲಿಕೆ ಮೇಲೆ ಸುಮಾರು ೬೭ರಲ್ಲಿ ನಾನು ಶಾಸಕನಾದ್ದಾಗಿನಿಂದ ಹೇಳುತ್ತಿದ್ದೇನೆ. ರಾಷ್ಟ್ರಧ್ವಜ ಇರಬೇಕಾದದ್ದು ಅಲ್ಲಿ ಇವತ್ತು ಮರಾಠಿ ಧ್ವಜ ಹಾಕಿದ್ದಾರೆ. ಅನೇಕ ಬಾರಿ ಇದನ್ನು ಸರ್ಕಾರದ ಹಿಂದೆ ಇದ್ದ ಪುರಸಭೆ ಸಚಿವರಿಗೂ ಗಮನಕ್ಕೆ ತಂದೆ. ಯಾರೂ ಇದರ ಬಗ್ಗೆ ಇವತ್ತಿನವರೆಗೂ ಕ್ರಮ ತೆಗೆದು ಕೊಂಡಿಲ್ಲ. ಅದು ಏನು ಕೇವಲ ಮರಾಠಿಯವರ ಪುರಸಭೆಯೇ? ಇದು ಅತ್ಯಂತ ಶೋಚನೀಯ ವಿಚಾರವೆಂದು ಹೇಳುತ್ತಿದ್ದೇನೆ. ಇದರ ಬಗ್ಗೆ ಸರ್ಕಾರ ಯಾವ ಒತ್ತಡಕ್ಕೂ ಮಣಿಯದೆ ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಿ ಮರಾಠಿ ಧ್ವಜವನ್ನು ತಕ್ಷಣ ಅಲ್ಲಿಂದ ಕೆಳಗಿಳಿಸುವುದಕ್ಕೆ ವ್ಯವಸ್ಥೆ ಮಾಡಬೇಕು, ಅಲ್ಲದೇ ಆ ಪುರಸಭೆಯಲ್ಲಿ ನೂರಕ್ಕೆ ಎಂಬತ್ತರಷ್ಟು ಕೆಲಸ ಮಾಡುವವರು ಮರಾಠಿವಾದಿಗಳೇ. ಅವರನ್ನು ಬೇರೆ ಕಡೆಗೆ ವರ್ಗ ಮಾಡಿ. ಅವರು ಮರಾಠಿ ಜನಾಂಗಕ್ಕೇ ಅನುಕೂಲ ಮಾಡುತ್ತಿದ್ದಾರೆ. ಇದು ಸರಿಯಲ್ಲ. ಗುರುತರವಾದ ಈ ಲೋಪವನ್ನು ಗಮನಿಸಿ ಧ್ವಜ ತೆಗೆಸದಿದ್ದರೆ ಸರ್ಕಾರದ ಸಾಮರ್ಥ್ಯಕ್ಕೇ ಅವಮಾನವಾಗುತ್ತದೆ. ಎಲ್ಲಾ ಕಡೆ ರಾಷ್ಟ್ರಧ್ವಜ ಇದೆ. ನಮ್ಮ ಬೆಂಗಳೂರು ನಗರಪಾಲಿಕೆ ಮೇಲೆ ರಾಷ್ಟ್ರಧ್ವಜ ಮತ್ತು ನಗರಪಾಲಿಕೆ ಧ್ವಜ ಎರಡೂ ಇದೆ. ಆದರೆ ಬೆಳಗಾವಿಯಲ್ಲಿ ತದ್ವಿರುದ್ಧ ಮರಾಠಿ ಧ್ವಜ ಮಾತ್ರ ಇದೆ,

ಶ್ರೀ ಕೆ. ಬಿ. ಕೋಳಿವಾಡ.—ಪಾಯಿಂಟ್ ಆಫ್ ಆರ್ಡರ್. ಇವತ್ತು ನಮ್ಮ ಮುಂದಿರುವುದು ಎಲೆಕ್ಟ್ರಲ್ ರೋಲ್ ವಿಷಯ ಮತ್ತು ೪ ವರ್ಷದಿಂದ ೫ ವರ್ಷಕ್ಕೆ ಅವಧಿಯನ್ನು ಎನ್‌ಹ್ಯಾನ್ಸ್ ಮಾಡುವುದು. ಈ ಎರಡು ವಿಷಯ ಬಿಟ್ಟು ಧ್ವಜ ಆದೂ ಇದೂ ಮಾತನಾಡುತ್ತಾ ಹೋದರೆ ಸದನದ ಮಹತ್ವದ ವೇಳೆಯನ್ನು ಹಾಳು ಮಾಡಿದಂತಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್.—ನಾನು ಆದಕ್ಕೆ ಪೂರಕವಾಗಿಯೇ ಮಾತನಾಡುತ್ತಿರುವುದು.

ಅಧ್ಯಕ್ಷರು.—ಧ್ವಜಕ್ಕೂ ಇದಕ್ಕೂ ಸಂಬಂಧವಿಲ್ಲ.

ಶ್ರೀ ವಾಟಾಳ್ ನಾಗರಾಜ್.—ಇಂಥ ಧ್ವಜವೇ ಹಾರಬೇಕೆಂದು ಇನ್ನೊಂದು ತಿದ್ದುಪಡಿ ತನ್ನಿ

ಶ್ರೀ ಬಿ. ಎಸ್. ಯಡಿಯೂರಪ್ಪ.—ಅಮೆಂಡ್‌ಮೆಂಟ್ ತಂದಾಗ ಇದುವರೆಗೂ ನಡೆದ ಚರ್ಚೆಗಳಲ್ಲಿ ಇಲಾಖೆಗೆ ಸಂಬಂಧಪಟ್ಟಂತೆ ಪ್ರಾಮುಖ್ಯ ಲೋಪದೋಷಗಳು ಏನಿವೆ ಅವುಗಳ ಬಗ್ಗೆ ಸದನದಲ್ಲಿ ಮಾತಾಡುವುದು ಹೊಸದೇನಲ್ಲ. ಇದು ಬಹಳ ಪ್ರಾಮುಖ್ಯವಾದ ವಿಚಾರ. ಬೆಳಗಾವಿಯಲ್ಲಿ ಕನ್ನಡ ನಾಡಿನ ಜನತೆ ತಲೆತಗ್ಗಿಸುವ ಕೆಲಸ ನಡೆಯುತ್ತಿದೆ, ಈಗ ಅಧಿಕಾರಕ್ಕೆ ಬಂದಿರುವಂತಹವರು ಇದರ ಬಗ್ಗೆ ತೀವ್ರವಾದಂತಹ ಗಮನ ಕೊಡಬೇಕೆಂದು ವಿನಂತಿಸುತ್ತೇನೆ. ಈ ತಿದ್ದುಪಡಿಯನ್ನು ಸರಕಾರದ ಗಮನಕ್ಕೆ ತಂದರೆ ಅದು ಕಾಲಹರಣವಾಗುತ್ತದೆಯೇ?

೯-೪೫ ಪಿ.ಎಂ.

ಅಧ್ಯಕ್ಷರು.—ಕಾಲಹರಣವೆಂದು ಅವರು ಹೇಳಲಿಲ್ಲ.

ಶ್ರೀ ವಾಟಾಳ್ ನಾಗರಾಜ್.—ಇದರ ಜೊತೆಗೆ ಆ ತಿದ್ದುಪಡಿಯನ್ನೂ ಕೂಡ ತರಬೇಕು. ಮಹಾನಗರಪಾಲಿಕೆ, ಪುರಸಭೆಗಳಲ್ಲಿ ಯಾವ ರೀತಿಯ ಧ್ವಜ ಇರಬೇಕು ಯಾವ ರೀತಿ ಹಾಕಬೇಕು ಅದಕ್ಕೆ ಏನೇನು ನೀತಿ ಇರಬೇಕೆಂಬ ಬಗ್ಗೆ ತಿದ್ದುಪಡಿಯನ್ನು ತರಬೇಕಾಗಿತ್ತು, ಇದು ನಮ್ಮ ವಾದವಾಗಿದೆ. ಮಾನ್ಯ ದೇಶಪಾಂಡೆಯವರು ಮಂತ್ರಿಗಳಾಗಿದ್ದಾಗ ನಾನು ಅವರ ಗಮನಕ್ಕೆ ಕೂಡ ಇದನ್ನು ತಂದಿದ್ದೆ ಆಗ ನಾನು ಶಾಸಕನಾಗಿರಲಿಲ್ಲ. ೧೯೬೭, ೭೨ರಲ್ಲಿ ಗಮನಕ್ಕೆ ತಂದೆ. ಮಾನ್ಯ ದೇವರಾಜಅರಸ್‌ರವರು ಕೂಡ ಈ ಗೊಂದಲವನ್ನು ನೋಡಿ ಬಹಳ ನೋವನ್ನು ಪಟ್ಟರು. ಈ ಸಂದರ್ಭದಲ್ಲಿ ನಾವು ಅವರನ್ನು ನೆನೆಸಿಕೊಳ್ಳಬೇಕಾಗಿದೆ. ಈ ಒಂದು ತಿದ್ದುಪಡಿಯನ್ನು ಅತಿ ಮುಖ್ಯವಾಗಿ, ಜರೂರಾಗಿ ತರಬೇಕೆಂದು ವಿನಂತಿಸುತ್ತೇನೆ. ಇನ್ನು ಕ್ಷೇತ್ರ ವಿಂಗಡಣೆಯನ್ನು ಮಾಡುವಾಗ ಯಾವುದೇ ವಿಧವಾದಂತಹ

ರಾಜಕೀಯವನ್ನು ಇಟ್ಟುಕೊಳ್ಳದೆ ಕ್ಷೇತ್ರ ವಿಂಗಡಣೆಯನ್ನು ಸಮರ್ಪಕವಾಗಿ ಮಾಡಬೇಕಾದುದು ನಿಮ್ಮ ಕರ್ತವ್ಯವೆಂದು ಹೇಳಿ ಅವರಿಗೆ ಕೆಲವು ಸಲಹೆಗಳನ್ನು ಕೊಟ್ಟು ನನ್ನ ಮಾತನ್ನು ಮುಗಿಸುತ್ತೇನೆ.

SRI B. R. MAHAGAONKAR.—Sir, I just want to clarify the fact. The Hon. Member Sri Vatal Nagaraj said that there is only one Bhagwa Flag over the Corporation of the City of Belgaum. It is not a fact. The National Flag is hoisted higher and below that there is Bhagwa Zenda. I do not think that Mr. Vatal Nagaraj or anybody else should take objection to that.

ಶ್ರೀ ವಾಟಾಳ್ ನಾಗರಾಜ್.—ರಾಷ್ಟ್ರಧ್ವಜದ ಮುಂದೆ ಅಥವಾ ಅದರ ಜೊತೆಯಲ್ಲಿ ಬೇರೆ ಯಾವ ಧ್ವಜವೂ ಕೂಡ ಇರುವುದಕ್ಕೆ ಅವಕಾಶವಿಲ್ಲ ಅಲ್ಲಿ ಮರಾಠಿ ಧ್ವಜ ಇರುವುದಕ್ಕೆ ಅವಕಾಶವಿಲ್ಲ ಕೂಡಲೇ ಅದನ್ನು ತೆಗೆದು ಹಾಕಬೇಕು. ಮರಾಠಿ ಚಿತ್ರಗಳೂ ಕೂಡ ಅಲ್ಲಿ ಇರಕೂಡದು ಇಡೀ ಮಹಾನಗರಪಾಲಿಕೆಯವರು ಮರಾಠಿ ನಗರಪಾಲಿಕೆಯನ್ನಾಗಿ ಮಾಡಿಕೊಂಡಿದ್ದಾರೆ ಅದೇ ನಗರ ಪಾಲಿಕೆಯಲ್ಲಿ ಬೆಳಗಾವಿ ಮಹಾರಾಷ್ಟ್ರಕ್ಕೆ ಹೋಗಬೇಕೆಂಬ ಕೆಟ್ಟ ನಿರ್ಣಯವನ್ನು ಮಾಡಿದ್ದಾರೆ, ಆ ಸರ್ಕಾರ ಆಗಲೇ ಆ ಮೇಯರ್‌ರವರನ್ನು ವಜಾ ಮಾಡಬೇಕಾಗಿತ್ತು.

ಶ್ರೀ ಬಿ. ಎಸ್. ಯಡಿಯೂರಪ್ಪ.—ಸರಕಾರ ಇದರ ಬಗ್ಗೆ ದಿಟ್ಟ ನಿಲುವನ್ನು ತೆಗೆದುಕೊಳ್ಳದಿದ್ದರೆ ಶಿಕಾರಿಪುರ ಪುರಸಭೆಯಲ್ಲಿ ಬಿ.ಜೆ.ಪಿ. ಫ್ಲಾಗ್ ಅನ್ನು ಹಾಕುತ್ತೇವೆ. ಮತ್ತೊಂದು ಕಡೆ ಕಾಂಗ್ರೆಸ್ ಬಾವುಟ ಹಾಕುತ್ತೇವೆಂದು ನೀವು ಹೇಳಬಹುದು. ಈ ಪರಿಪಾಠ ಸರಿಯಲ್ಲ. ಸರಕಾರ ತಕ್ಷಣ ಆದೇಶ ಕೊಟ್ಟು ರಾಷ್ಟ್ರಧ್ವಜ ಒಂದೇ ಇರಬೇಕು ಬೇರೆ ಧ್ವಜ ಇರಬಾರದು ಎಂಬ ನಿಲುವನ್ನು ತೆಗೆದುಕೊಳ್ಳಬೇಕು ನಾವು ಹಿಂದೆ ಹೇಳಿದಾಗ ಹಿಂದಿನ ಸರಕಾರದ ಕಿವಿ ಕೇಳಲಿಲ್ಲ. ಮಾನ್ಯ ಮಂತ್ರಿಗಳು ಉತ್ತರ ಕೊಡುವ ಸಂದರ್ಭದಲ್ಲಿ ಇದರ ಬಗ್ಗೆ ಸ್ಪಷ್ಟಪಡಿಸಬೇಕು.

(ಮಾನ್ಯ ಹಿಂಡಸಗೇರಿಯವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.)

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಈ ನಿರ್ಧಾರವನ್ನು ಪ್ರಕಟಿಸಬೇಕು. ಇಲ್ಲದಿದ್ದರೆ ತುಂಬಾ ತೊಂದರೆಯಾಗುತ್ತದೆ.

ಶ್ರೀ ಕೆ.ಎಸ್. ಈಶ್ವರಪ್ಪ.—ಮಾನ್ಯ ಮಂತ್ರಿಗಳು ಈ ತಿದ್ದುಪಡಿ ತಂದಿರುವ ಬಗ್ಗೆ ನಾನು ಅವರನ್ನು ಅಭಿನಂದಿಸುತ್ತಾ ಸ್ವಾಗತವನ್ನು ಕೋರುತ್ತಿದ್ದೇನೆ. ನಮ್ಮ ಜಿಲ್ಲೆಯ ಮಾನ್ಯ ಯಡಿಯೂರಪ್ಪನವರು ಹೇಳಿದ ಹಾಗೆ ಅನೇಕ ಡಿವಿಜನ್‌ಗಳಲ್ಲಿರುವ ಜನಸಂಖ್ಯೆ ಒಂದೇ ರೀತಿಯಲ್ಲಿ ಇಲ್ಲ. ಒಂದೊಂದು ರೀತಿಯಲ್ಲಿ ಇದೆ ಒಂದು ಡಿವಿಜನ್‌ನಲ್ಲಿ ೫ ಸಾವಿರ ಇದ್ದರೆ ಇನ್ನೊಂದು ಡಿವಿಜನ್‌ನಲ್ಲಿ ೨೫ ಸಾವಿರ, ೩೦, ೩೫ ಸಾವಿರ ಇರುತ್ತಾರೆ. ಇಂತಹ ಕಡೆಯಲ್ಲಿ ಗೆದ್ದು ಬಂದ ಶಾಸಕರಿಗೆ ನಿಮಗೆ ಕ್ಷೇತ್ರಗಳಿಗೆಲ್ಲಾ ಒಂದೇ ರೀತಿಯ ಸಹಾಯ ಧನವನ್ನು ಕೊಟ್ಟರೆ ಸಾಧ್ಯವಾಗುವುದಿಲ್ಲ. ಆಯಾಯಾ ಕ್ಷೇತ್ರದ ಜನಸಂಖ್ಯೆಯನ್ನು ನೋಡಿಕೊಂಡು ಅಲ್ಲಿನ ಕ್ಷೇತ್ರದ ಅಭಿವೃದ್ಧಿಗೆ ಗಮನ ಕೊಡಬೇಕು. ಇದಕ್ಕೆ ತಿದ್ದುಪಡಿ ಮಾಡಿ ಜನಸಂಖ್ಯೆಗೆ ತಕ್ಕಂತೆ ಪ್ರತಿನಿಧಿಗಳನ್ನು ನಿಲ್ಲಿಸುವಂತಹ ಅವಕಾಶವನ್ನು ಮಾಡುವ ಮೂಲಕ ಜನರಿಗೆ ಅನುಕೂಲ ಮಾಡಿಕೊಡಬೇಕೆಂದು ವಿನಂತಿಸುತ್ತೇನೆ. ಆ ನಂತರ ಚುನಾವಣೆ ನಡೆಸಿದರೆ ಕರ್ನಾಟಕದ ಜನತೆಗೆ ನ್ಯಾಯ ದೊರಕಿಸುವಲ್ಲಿ ಸಫಲವಾಗುತ್ತೀರಿ ಎಂಬ ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಡಾ. ಎನ್. ಬಿ. ನಂಜಪ್ಪ (ಶ್ರವಣಬೆಳಗೊಳ).— ಮಾನ್ಯ ಅಧ್ಯಕ್ಷರೇ, ಮುನಿಸಿಪಾಲಿಟಿ ಬಗ್ಗೆ ಮಾತನಾಡತಕ್ಕಂತಹ ಸಂದರ್ಭದಲ್ಲಿ ನಮ್ಮ ಮುನಿಸಿಪಾಲಿಟಿಯ ಬಗ್ಗೆ ಮಾತನಾಡಿ ನಂತರ ಬೇರೆ ಕೆಲವು ವಿಚಾರಗಳನ್ನು ಹೇಳುವುದಕ್ಕೆ ಪ್ರಯತ್ನ ಮಾಡುತ್ತೇನೆ. ಚನ್ನಪಟ್ಟಣದ ಸಣ್ಣ ಮುನಿಸಿಪಾಲಿಟಿಯಲ್ಲಿ ಹೊಸದಾಗಿ ಮತದಾರರ ಪಟ್ಟಿಯನ್ನು ಮಾಡತಕ್ಕಂತಹ ಸಂದರ್ಭದಲ್ಲಿ ಸ್ಲಂ ಏರಿಯಾ ಎಲ್ಲಿ ಇದೆ ಎಲ್ಲಿ ಬಡವರಿದ್ದು ಕಾಂಗ್ರೆಸ್‌ಗೆ ಓಟನ್ನು ಹಾಕುತ್ತಾರೆ. ಅಂತಹ ಕಡೆಯಲ್ಲಿ ೫ ಸಾವಿರ ಮತದಾರರ ಪಟ್ಟಿ ಇಲ್ಲದ ಹಾಗೆ ಮಾಡಿದ್ದಾರೆ ಕ್ಷೇತ್ರ ವಿಂಗಡಣೆ ಮಾಡುವಂಥ ಸಂದರ್ಭದಲ್ಲಿ ಕೂಡ ಪಕ್ಷಪಾತಿಯಾಗಿ ಧೋರಣೆಯನ್ನು ತೋರಿಸಿದ್ದಾರೆ.

ಶ್ರೀ ಆರ್. ವಿ. ದೇಶಪಾಂಡೆ.—ಚನ್ನಪಟ್ಟಣ ಬಹಳ ಸಣ್ಣ ಮುನಿಸಿಪಾಲಿಟಿ ಎಂದು ತಾವೇ ಹೇಳಿದಿರಿ ಅಂತಹ ಕಡೆಯಲ್ಲಿ ೫ ಸಾವಿರ ಮತದಾರರು ಪಟ್ಟಿಯಲ್ಲಿ ಬಿಟ್ಟು ಹೋಗಿದೆ ಎಂದು ಹೇಳುತ್ತಿದ್ದೀರಿ ಇದು ಹೇಗೆ ಸಾಧ್ಯ ? ಮುನಿಸಿಪಾಲಿಟಿಯಲ್ಲಿ ಇದ್ದದ್ದು ೭ ಸಾವಿರ ಮತದಾರರು

ಅಂಥಾದ್ದರಲ್ಲಿ ಇಷ್ಟು ಮತದಾರರು ಬಿಟ್ಟು ಹೋಗಂವುದಕ್ಕೆ ಹೇಗೆ ಸಾಧ್ಯ ? ಟೀಕೆ ಮಾಡುವಾಗ ಜವಾಬ್ದಾರಿಯಿಂದ ಮಾಡಬೇಕು ನೀವು ಇದನ್ನು ಪ್ರೂವ್ ಮಾಡುತ್ತೀರಾ ?

ಡಾ. ಎನ್. ಬಿ. ನಂಜಪ್ಪ.—೨೦ ಸಾವಿರ ಮತದಾರರು ಇರತಕ್ಕಂತಹ ಮುನಿಸಿಪಾಲಿಟಿಯಲ್ಲಿ ೧೨ ಸಾವಿರ ಮತದಾರರು ಈ ಸಾರಿ ಇದ್ದರು. ಕಳೆದ ಬಾರಿ ೭ ಸಾವಿರ ಮತದಾರರು ಇದ್ದರು. ನಾನು ಸುಳ್ಳು ಹೇಳುತ್ತಿಲ್ಲ ಬೇಕಾದರೆ ತೋರಿಸುತ್ತೇನೆ. ಹೀಗೆ ಅನೇಕ ಕಡೆಯ ಊರುಗಳಲ್ಲಿ ನಡೆದಿದೆ. ಚನ್ನಪಟ್ಟಣದಲ್ಲಿ ಕಾಂಗ್ರೆಸ್‌ನವರಿಗೆ ಯಾವ ಮನೆಗಳ ಓಟು ಹೋಗುತ್ತದೆಂದು ತಿಳಿದುಕೊಂಡು ಅವರ ಹೆಸರನ್ನು ಕೈ ಬಿಟ್ಟಿದ್ದಾರೆ. ಚನ್ನಪಟ್ಟಣದ ಇನ್ನೊಂದು ಮುನಿಸಿಪಾಲಿಟಿಯಲ್ಲಿ ೪೦೦ ಜನಗಳಿಗೆ ಒಂದು ಕ್ಷೇತ್ರವನ್ನಾಗಿ ಮಾಡಿ ಆ ಮತದಾರರ ಮೂಲಕ ಒಬ್ಬರು ಚುನಾವಣೆಯಲ್ಲಿ ಗೆದ್ದರು ಇಂತಹ ಅನ್ಯಾಯಗಳು ನಡೆಯುತ್ತಿವೆ. ಇನ್ನು ಮುಂದೆ ಕ್ಷೇತ್ರ ವಿಂಗಡಣೆ ಮಾಡುವಾಗ ಇಂತಹ ಅನ್ಯಾಯಗಳು ಆಗದಂತೆ ಆದನ್ನು ತಡೆಗಟ್ಟಬೇಕು. ಈಗ ಮಂತ್ರಿಗಳಾಗಿರತಕ್ಕಂತಹವರು ಇದರ ಬಗ್ಗೆ ಚಿಂತನೆ ಮಾಡಬೇಕು. ಕ್ಷೇತ್ರ ವಿಂಗಡಣೆ ಮಾಡತಕ್ಕಂತಹ ಕಾಲದಲ್ಲಿ ಒಂದು ಮ್ಯಾಪ್ ಅನ್ನು ತಯಾರು ಮಾಡಿ ಡಿ.ಸಿ.ಯವರ ಮುಂದೆ ಇಟ್ಟಾಗ ಆದನ್ನು ಬದಿಗೊತ್ತಿ ಕ್ಷೇತ್ರ ವಿಂಗಡಣೆ ಮಾಡಿದರು. ಅದೇ ರೀತಿ ಮುನಿಸಿಪಾಲಿಟಿ ಮತ್ತು ಕಾರ್ಪೊರೇಷನ್‌ಗಳಲ್ಲಿ ಮಾಡಿದ್ದಾರೆ. ಇಂತಹ ಕೆಲಸ ನಡೆಯಬಾರದು. ಇನ್ನು ಮುಂದೆ ಕ್ಷೇತ್ರ ವಿಂಗಡಣೆ ಮಾಡುವಾಗ ಜನಗಳಿಗೋಸ್ಕರ ಪ್ರತಿಯೊಬ್ಬ ಪ್ರಜೆಯು ಅನುಕೂಲಕೋಸ್ಕರ ಮಾಡಬೇಕು. ಅವನು ತನ್ನ ಹಕ್ಕನ್ನು ಚಲಾಯಿಸುವುದಕ್ಕೆ ಅನುಕೂಲವಾಗಬೇಕು. ಪಕ್ಷಗಳ ಅನುಕೂಲಕ್ಕೋಸ್ಕರ ಮತದಾರರ ಪಟ್ಟಿಯನ್ನು ತಯಾರು ಮಾಡತಕ್ಕಂತಹ ಹವ್ಯಾಸವನ್ನು ಯಾವ ಪಕ್ಷದವರೂ ಇಟ್ಟುಕೊಳ್ಳಬಾರದು. ಮಾನ್ಯ ವಾಟಾಳ್‌ನಾಗರಾಜರವರು ಹೇಳಿದಂತೆ ಯಾವುದೇ ಕಾರ್ಪೊರೇಷನ್, ಯಾವುದೇ ಸರಕಾರಿ ಕಟ್ಟಡಗಳಲ್ಲಿ ರಾಷ್ಟ್ರಧ್ವಜ ಹಾರಾಡಬೇಕು ಅದರ ಬದಲು ಬೇರೆ ಪಕ್ಷದ ಧ್ವಜ ಹಾರಾಡತಕ್ಕಂಥಾದ್ದು ಪ್ರಜಾಪತ್ರಿಗೆ ಸರಿಯಾದುದಲ್ಲವೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† SRI QUAMARUL ISLAM (Gulbarga).—Mr. Speakar Sir, I have no objection for passing of this amending Bill. However, I would like to make one or two suggestions to the Government regarding electoral roll and Divisions. It is a fact that even in Gulbarga Corporation, there is a division which is having less than thousand Voters ond there is another division having more than ten thousnd Voters. This is not only happening in respect of Corporations but also in respect of Assembly constituencies. There are 87,000 voters in one constituency at Bangalore and there is another constituency where there are 3,99,000 voters. Why this disparity ? If the Government wanted to have an election to these bodies. I would like them to see that the divisions are made according to the Population. Secondly, as far as ladies reservation is concerned, we have seen that there is only one muslim lady in the Bangalore City Corporation having more than 6 lakh voters in the Bangalore City. Why this has happened ? This has happened because it was Particularly done sinis it was a muslim dominated area. I would like the Government to bring an amendment to set right the in justice done on minorities. Sufficient representation to minoritie is essential in a secular and democratic country like ours. Minorities are symbol of secularism. It will be against the democratic norms to suppress the minorities. I would like the Government to have to have this in mind. with these few words Sir, I sumbit that I have no objection in passing this amending Bill.

ಶ್ರೀ ಗೋಪಿನಾಥ್ ಆರ್. ಸಾಂದ್ರ (ಹುಬ್ಬಳ್ಳಿ).— ಸನ್ಮಾನ್ಯ ಅಧ್ಯಕ್ಷರೇ, ಇವತ್ತು ಸನ್ಮಾನ್ಯ ವೀರಪ್ಪ ಮೊಯಿಲ್ಲಿಯವರು ತಂದಂಥ ತಿದ್ದುಪಡಿಯನ್ನು ಸ್ವಾಗತಿಸುತ್ತ ಕೆಲವು ಪ್ರಾಕ್ಟಿಕಲ್ ಡಿಫಿಕಲ್ಟೀಸನ್ನು ವಿಚಾರ ಮಾಡುವ ಕಾಲಕ್ಕೆ ಇದನ್ನು ಗಮನಿಸಬೇಕು ಎಂದು ನಾನು ಹೇಳಬಯಸುತ್ತಾ ಇದ್ದೇನೆ. ಮೊದಲಿನಿಂದಲೂ ಕಾಂಗ್ರೆಸ್ ಪಕ್ಷದವರು ಪ್ರಜಾಪ್ರಭುತ್ವದಲ್ಲಿ ಇದನ್ನು ಕಾರ್ಯರೂಪಕ್ಕೆ ತಂದಂಥವರು. ಆದಕಾರಣ ಈಗ ಅಸೆಂಬ್ಲಿ ಚುನಾವಣೆಗಳು ಆದ ಮೇಲೆ ಮುನಿಸಿಪಲ್ ಕಾರ್ಪೊರೆಷನ್ ಪಂಚಾಯಿತಿಗಳು ಮತ್ತಿತರ ಸಂಸ್ಥೆಗಳ ಚುನಾವಣೆಗಳನ್ನು ಮಾಡಬೇಕು ಎಂದು ಏನು ನಿರ್ಣಯವನ್ನು ತಗೆದುಕೊಂಡಿದ್ದಾರೆ ಅದನ್ನು ನಾನು ಹೃದಯದಿಂದ ಸ್ವಾಗತಿಸುತ್ತೇನೆ. ಇದರ ಬಗ್ಗೆ ಕೆಲವು ಸ್ನೇಹಿತರೇ ಮಾತನಾಡಿದ್ದನ್ನು ನೋಡಿ ನನಗೆ ಆಶ್ಚರ್ಯವಾಗುತ್ತಿದೆ. ವಿರೋಧಪಕ್ಷದವರು ಈ ಚುನಾವಣೆಗಳು ಆಗಬಾರದು ಎಂಬ ದೃಷ್ಟಿಕೋನವನ್ನು ಇಟ್ಟುಕೊಂಡು ಮಾತನಾಡುತ್ತಾ ಇದ್ದಾರೆ. ಇದು ನಿಜವಾಗಿಯೂ ಆಶ್ಚರ್ಯವಾಗುತ್ತಾ ಇದೆ. ವಿರೋಧಪಕ್ಷದವರೂ ಕೂಡ ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಈ ಚುನಾವಣೆಗಳನ್ನು ಮಾಡುತ್ತೇವೆಂದು ಹೇಳಿದ್ದಾರೆ.

ಶ್ರೀ ವಾಟಾಳ್ ನಾಗರಾಜ್.—ಚುನಾವಣೆಗಳನ್ನು ಯಾವ ದಿನಾಂಕ ಮಾಡುತ್ತೇವೆಂದು ಹೇಳಲಿ, ದಿನಾಂಕವನ್ನು ಪ್ರಕಟಿಸಲಿ. ಒಂದು ತಿಂಗಳಲ್ಲಿ ಮಾಡುತ್ತೀರಾ, ಎಂಟು ತಿಂಗಳಲ್ಲಿ ಮಾಡುತ್ತೀರಾ ಎನ್ನುವುದನ್ನು, ಹೇಳಿ ?

ಶ್ರೀ ಆರ್. ವಿ. ದೇಶಪಾಂಡೆ.— ಈ ಚುನಾವಣೆಗಳನ್ನು ಯಾವಾಗ ಮಾಡುತ್ತೀರಿ ಎನ್ನುವುದನ್ನು ರಾಜ್ಯಪಾಲರ ಭಾಷಣದಲ್ಲಿ ಹೇಳುವುದು ಸಾಧ್ಯವಿತ್ತು, ಹೇಳಲಿಲ್ಲ. ಯಾವಾಗ ಚುನಾವಣೆಗಳನ್ನು ಮಾಡುತ್ತಾರೆ ಎನ್ನುವುದನ್ನು ಹೇಳಲಿ. ಮಾನ್ಯ ಸದಸ್ಯರು ನಾವು ಇದನ್ನು ವಿರೋಧಮಾಡಿದ್ದೇವೆ ಎಂದು ಹೇಳಿದರು, ಅದು ಕಡತದಲ್ಲಿದ್ದರೆ ತೆಗೆಸಿ ನೋಡೋಣ.

ಒಬ್ಬ ಮಾನ್ಯ ಸದಸ್ಯರು.—ಒಂದು ಕಡೆ ಡಿವಿಜನ್ ಚೆನ್ನಾಗಿಲ್ಲ ಎಂದು ಹೇಳುತ್ತಾರೆ, ಅನೇಕ ಕಾರಣಗಳನ್ನು ಹೇಳುತ್ತಾರೆ. ಮೇಯರ್‌ಗೆ ಒಂದು ವರ್ಷದಲ್ಲಿ ಬಹಳಷ್ಟು ಸಮಯ ಸಿಗುವುದಿಲ್ಲ.

ಶ್ರೀ ಆರ್. ವಿ. ದೇಶಪಾಂಡೆ.—ಕಾಯಿದೆಯಿಲ್ಲವೇ, ಕಾಯಿದೆ ಪ್ರಕಾರಮಾಡಿ.

ಶ್ರೀ ಗೋಪಿನಾಥ ಆರ್. ಸಾಂದ್ರ.—ಆಗ ನಿಮ್ಮ ಸರ್ಕಾರ ಇತ್ತು ಏಕೆ ಮಾಡಲಿಲ್ಲ ಹೇಳಿ ?

ಶ್ರೀ ಬಿ. ಎಸ್. ಯಡಿಯೂರಪ್ಪ.— ನಾವು ಏನು ಅಭಿಪ್ರಾಯ ಕೊಡುವುದಿಲ್ಲ, ಪಾಸ್ ಮಾಡಿಕೊಳ್ಳಲಿ ಸ್ವಾಮಿ.

ಶ್ರೀ ಗೋಪಿನಾಥ ಆರ್. ಸಾಂದ್ರ.—ಈ ತಿದ್ದುಪಡಿಯನ್ನು ನಾನು ಸ್ವಾಗತ ಮಾಡುತ್ತೇನೆ. ಇದರ ಜೊತೆಗೆ ನಾನು ಕೆಲವು ಸಲಹೆಗಳನ್ನು ಮಾಡಬೇಕು ಎಂದು ಇದ್ದೇನೆ. ಜನತಾ ಸರ್ಕಾರದವರು ಚುನಾವಣೆ ಕ್ಷೇತ್ರಗಳ ವಿಂಗಡಣೆ ಮಾಡುವಾಗ. ಅನೇಕ ಅನ್ಯಾಯಗಳನ್ನು ಮಾಡಿದ್ದಾರೆ. ಒಂದು ಕ್ಷೇತ್ರದಲ್ಲಿ ಎರಡುಸಾರ ಮತದಾರರು ಇದ್ದರೆ, ಇನ್ನೊಂದು ಕ್ಷೇತ್ರದಲ್ಲಿ ಒಂದುಸಾವಿರ ಮತದಾರರು ಇದ್ದಾರೆಂದು ಈಗ ಅವರು ಕೂಡ ಹೇಳುತ್ತಿದ್ದಾರೆ, ಈ ತಿದ್ದುಪಡಿ ಮಾಡಿದೇ ಈ ಒಂದು ತಾರತಮ್ಯವನ್ನು ನಿವಾರಿಸಬಹುದೆಂದು ನನಗೆ ತಿಳಿದುಬಂದಿದೆ. ಸರ್ಕಾರದವರು ಈ ಒಂದು ಕೆಲಸವನ್ನು ಕೂಡಲೇ ಮಾಡಬೇಕಾಗಿದೆ. ರಿಸರ್ವೇಷನ್ ಗೊತ್ತು ಮಾಡುವಾಗ ಕಾಂಗ್ರೆಸ್‌ನವರು ಮತ್ತು ಪೈನಾರಿಟೀಸ್ ನವರು ಅರಿತು ಬರದ ಹಾಗೆ ವಿಂಗಡನೆ ಮಾಡಿದ್ದಾರೆ. ಸರ್ಕಾರದವರು ಇದರ ಬಗ್ಗೆ ವಿಚಾರ ಮಾಡಿ, ನ್ಯಾಯವಾದದ್ದನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಬಿ ಪಿ ಎಂ.ಸಿ ಆಕ್ಟ್‌ನಲ್ಲಿ ಚುನಾವಣಾ ಕ್ಷೇತ್ರಗಳ ವಿಂಗಡಣೆ ಮಾಡುವುದಕ್ಕೆ ಸಂಬಂಧಪಟ್ಟಂತೆ ದೋಷ ಇದ್ದರೆ, ಅದನ್ನು ಸರಿಪಡಿಸಬೇಕು. ಓಟರ್ಸ್ enrolment ವಿಚಾರದಲ್ಲಿಯೂ ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ. ಚುನಾವಣೆ ಆಗಬೇಕೆಂಬುದನ್ನು ಸ್ವಾಗತಿಸುತ್ತೇವೆ. ಇದನ್ನು ಕಾಯಿದೆ ಚೌಕಟ್ಟಿನಲ್ಲಿ ತಂದು ಮಾಡಿ ೪ ವರ್ಷ ಇದ್ದದನ್ನು ೫ ವರ್ಷ ಮಾಡಿದ್ದಾದು ಸರಿ. ಇಷ್ಟು ಹೇಳಿ ಮಾನ್ಯ ಸಚಿವರು ತಂದಿರುವ ತಿದ್ದುಪಡಿ ವಿಧೇಯಕವನ್ನು ಸ್ವಾಗತಿಸುತ್ತೇನೆ.

† ಶ್ರೀ ಎ. ಕೆ. ಆನಂತಕೃಷ್ಣ (ಶಿವಾಜಿನಗರ).— ನಮ್ಮ ಮುಂದಿರತಕ್ಕ ತಿದ್ದುಪಡಿ ವಿಧೇಯಕ ಕೇವಲ ಮತದಾರರ ಪಟ್ಟಿಗೆ ಸಂಬಂಧಪಟ್ಟದ್ದಾದು. ಬೇರೆ ವಿಷಯಗಳಿಗೆ ಸಂಬಂಧಪಟ್ಟಿಲ್ಲವೆಂದು ಕಾಣುತ್ತದೆ. ವಿಧಾನ ಸಭೆ ಚುನಾವಣೆಯಲ್ಲಿ ಯಾವ ಮತದಾರರ ಪಟ್ಟಿಯನ್ನು ಬಳಸಿದ್ದಾರೋ ಅದೇ ಮತದಾರರ ಪಟ್ಟಿಯನ್ನು ನಗರಸಭೆಗಳ ಚುನಾವಣೆಗೂ ಅನ್ವಯಿಸಬೇಕೆಂದು ಹೇಳುತ್ತಿದ್ದಾರೆ. ಕಾರಣ ಹೊಸದಾಗಿ ಮತದಾರರ ಪಟ್ಟಿ ಮಾಡುವುದಕ್ಕೆ ಸಮಯ ಇಲ್ಲ. ಹಾಲಿ ಇರತಕ್ಕ ಮತದಾರರ ಪಟ್ಟಿಯನ್ನು ಅನ್ವಯಿಸುವುದು ಸೂಕ್ತವಾಗಿದೆ. ಈ ವಿಷಯವನ್ನು ಚರ್ಚೆ ಮಾಡುವಾಗ ಸದಸ್ಯರಲ್ಲಿರತಕ್ಕ ಶಂಕೆ ಇನ್ನಿತರ ಮುಖ್ಯ ವಿಷಯಗಳನ್ನು ಚರ್ಚೆ ಮಾಡುವುದಕ್ಕೆ ಅವಕಾಶ ಕೊಡುವುದು ಸೂಕ್ತ. ನಾನು

ಈ ಸಂದರ್ಭದಲ್ಲಿ ನನ್ನ ಒಂದು ಸ್ವಂತ ಅನುಭವದಿಂದ ಹೇಳಬಯಸುತ್ತೇನೆ. ಕೆಲವು ಮಿತ್ರರು ಈಗಾಗಲೇ ಹೇಳಿದ್ದಾರೆ. ಚುನಾವಣೆ ಕ್ಷೇತ್ರಗಳನ್ನು ವಿಂಗಡಿಸುವಾಗ ಬಹಳ ತಾರತಮ್ಯದಿಂದ ವಿಂಗಡಿಸುತ್ತಿದಾರೆ. ಇದು ಬಹಳ ಕಾಲದಿಂದ ನಡೆದುಕೊಂಡಿರುವ ಪದ್ಧತಿ. ಆಡಳಿತಾಧಿಕಾರಿಗಳು ತಮ್ಮ ಕೈಕೆಳಗಿನ ಅಧಿಕಾರಿಗಳಿಗೆ ಈ ಒಂದು ಕೆಲಸವನ್ನು ವಹಿಸುತ್ತಾರೆ ಅವರು ತಮ್ಮ ರಾಜಕಾರಣಕ್ಕೆ ಅನುಕೂಲವಾಗಿ ವಿಂಗಡಣೆ ಮಾಡಿಕೊಂಡು ಅದನ್ನೇ ಸರ್ಕಾರಕ್ಕೆ ಕಳುಹಿಸಿಕೊಡುತ್ತಾರೆ. ಹಿರಿಯ ಅಧಿಕಾರಿಗಳು ಕೂಡ ಇದರ ಬಗ್ಗೆ ಹೆಚ್ಚು ಗಮನಕೊಡುವುದಿಲ್ಲ. ಈ ವಿಚಾರದಲ್ಲಿ ತೀವ್ರತರವಾಗಿ ಆಲೋಚನೆ ಮಾಡುವುದಕ್ಕೆ ಸಾಧ್ಯವಿಲ್ಲದಂಥ ಪರಿಸ್ಥಿತಿಯಲ್ಲಿ ಪಾಸು ಮಾಡಿಸಿಬಿಡುತ್ತಾರೆ. ಇದು ಕೇವಲ ಅಡ್ಮಿನಿಸ್ಟ್ರೇಟೀವ್ ಕನ್ವೀನಿಯನ್ಸಿಗಾಗಿ ಸಾರ್ವಜನಿಕ ಹಿತದೃಷ್ಟಿಯಿಂದ ಮತ್ತು ಪ್ರಜಾಪ್ರಭುತ್ವ ಊರ್ಜಿತಗೊಳಿಸುವ ದೃಷ್ಟಿಯಿಂದ ಮಾಡುವ ಪ್ರಯತ್ನವಲ್ಲ. ಇದು ನನ್ನ ತೀವ್ರವಾದ ನಂಬಿಕೆ ಮತ್ತು ಅನುಭವ. ತಿದ್ದುಪಡಿಗಳನ್ನು ಪೀಸ್ ಪೀಸಾಗಿ ತರದೆ, ನಗರಾಡಳಿತ ಸಭೆಗಳಿಗೆ ಸಂಬಂಧಪಟ್ಟಂತೆ ಕಾಂಪ್ರೆಹೆನ್ಸೀವ್ ಆಗಿ ತರಬೇಕೆಂದು ಹೇಳುತ್ತೇನೆ.

ಇಂಥ ಸಂದರ್ಭದಲ್ಲಿ ನಮ್ಮ ಆಡಳಿತಾಧಿಕಾರಿಗಳು ರಾಜ್ಯಸರ್ಕಾರದ ಮಟ್ಟದಲ್ಲಾಗಿರಲಿ, ಪ್ರಾಂತಸಭೆಗಳ ಮಟ್ಟದಲ್ಲಾಗಿರಲಿ, ಇಂತಹ ತಿದ್ದುಪಡಿಗಳನ್ನು ಸೂಚನೆ ಮಾಡುವಾಗ ಸಮಗ್ರವಾಗಿ ಎಲ್ಲಾ ವಿಷಯಗಳನ್ನು ಆದರಲ್ಲೂ ಸಾರ್ವಜನಿಕರ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಪ್ರಜಾಪ್ರಭುತ್ವದ ಒಂದು ಹಿತದೃಷ್ಟಿಯನ್ನು ತೀವ್ರವಾಗಿ ಗಮನದಲ್ಲಿಟ್ಟುಕೊಂಡು ಮಾಡಬೇಕಾದ್ದು ಒಳ್ಳೆಯ ಕರ್ತವ್ಯ. ಆ ಒಂದು ಕರ್ತವ್ಯ ದೃಷ್ಟಿಯಿಂದ ಮಾಡಬೇಕೆ ವಿನಹ ಕೇವಲ ಒಂದು ಅಡ್ಮಿನಿಸ್ಟ್ರೇಟೀವ್ ಕನ್ವೀನಿಯನ್ಸ್‌ಗೆ ಯಾರನ್ನೋ ಓಲೈಸಿಕೊಳ್ಳುವುದಕ್ಕೆ ಮಾಡುವುದು ಸೂಕ್ತ ಅಲ್ಲ. ಎಂದು ನಾನು ಭಾವಿಸುತ್ತೇನೆ. ಇನ್ನು ವಾರ್ಡ್ ವಿಂಗಡಣ ವಿಷಯದಲ್ಲಿ ಹೇಳಬೇಕೆಂದರೆ ಬೆಂಗಳೂರು ನಗರಸಭೆಯಲ್ಲಿ ವಾರ್ಡ್‌ಗಳನ್ನು ವಿಂಗಡಣೆ ಮಾಡಿದ್ದುದು ಹಿಂದಿನ ಒಂದು ಸರ್ಕಾರ, ಆಗ ಜನತಾ ಸರ್ಕಾರ ಇತ್ತು ಹಿಂದೆ ವಾರ್ಡ್‌ಗಳನ್ನು ವಿಂಗಡಣೆ ಮಾಡುವಂಥ ಸಂದರ್ಭದಲ್ಲಿ ಕೆಲವೊಂದು ಆಕ್ಷೇಪಣೆಗಳನ್ನು ನಮ್ಮ ಸಂಬಂಧಪಟ್ಟವರಿಗೆ ಹೇಳಿದ್ದೆವು. ಹಿಂದುಳಿದವರು ಕಡುಬಡವರು ಕಾರ್ಮಿಕರು ಹರಿಜನ–ಗಿರಿಜನರು ಅಲ್ಪಸಂಖ್ಯಾತರು ಗೆದ್ದುಬರುವಂಥ ಸನ್ನಿವೇಶ ಇಲ್ಲದ ರೀತಿಯಲ್ಲಿ ವಾರ್ಡ್‌ಗಳನ್ನು ವಿಂಗಡಣೆ ಮಾಡಿದ್ದಾರೆ. ಅದನ್ನು ಬೇಕೆಂದೇ ಮಾಡಿದ್ದಾರೆ ಅದನ್ನೂ ಮೊದಲೇ ಮಾಡಿ ಇಟ್ಟುಕೊಂಡು ಮಾಡಿದ್ದಾರೆಂದು ನಾನು ಹೇಳಲಿಕ್ಕೆ ತಯಾರಿಲ್ಲ. ಒಟ್ಟಿನಲ್ಲಿ ಜವಾಬ್ದಾರಿ ರಹಿತವಾಗಿ ಮಾಡಿದ್ದಾರೆ. ಇವೊತ್ತು ಇಡಿ ಜನಾಂಗಕ್ಕೆ ಒಳ್ಳೆಯದನ್ನು ಮಾಡುವ ರೀತಿಯಲ್ಲಿ ಸೆಕ್ಯುಲರ್ ಕ್ಯಾರಕ್ಟರ್ ಉಳಿಸಿಕೊಂಡು ಹೋಗುವಂತೆ ಮಾಡಬೇಕು. ನಮ್ಮ ರಾಷ್ಟ್ರದ ರಾಜ್ಯಾಂಗದಲ್ಲಿರುವ ಒಂದು ಅಂಶ ಏನಿದೆ ಆ ದೃಷ್ಟಿಯಲ್ಲಿ ಇದನ್ನು ಮಾಡಬೇಕಾದದ್ದು ಅವಶ್ಯಕತೆ ಇದೆ. ಕೆಲವು ಸಂದರ್ಭದಲ್ಲಿ ಜಾತಿ ಮತದ ಹೆಸರಿನಲ್ಲಿ ಕೆಲವರು ಮುಂದಕ್ಕೆ ಬರಬೇಕೆಂದು ತಮ್ಮ ಪ್ರಭಾವವನ್ನು ಬೀರುತ್ತಾರೆ ಅದಕ್ಕೆ ಬಲಿಯಾಗಬಾರದೆಂದು ನಾನು ಹೇಳಬಯಸುತ್ತೇನೆ. ಈಗ ಮಂತ್ರಿಯೊಂದು ತಿದ್ದುಪಡಿ ಸೇರಿಸಲಿಕ್ಕೆ ಸಾಧ್ಯ ಇದೆಯೋ ಏನೋ ನನಗೆ ಗೊತ್ತಿಲ್ಲ. ಸಾಧ್ಯವಿದ್ದರೆ ತಾವು ಒಂದು ವಿಷಯ ಘೋಷಣೆ ಮಾಡಬೇಕು. ಯಾವ ಒಂದು ಚುನಾವಣೆಯನ್ನು ಮಾಡಬೇಕೆಂಬ ದೃಷ್ಟಿಯಿಂದ ವಿಧಾನಸಭೆಗೆ ಸಂಬಂಧಪಟ್ಟಂಥ ಮತದಾರರ ಪಟ್ಟಿಯನ್ನು ನಗರಸಭೆಗಳಿಗೂ ಅನ್ವಯಿಸಬೇಕೆಂದು ಏನು ಮಾಡುತ್ತಿದ್ದೀರಿ ಈ ಒಂದು ಸಂದರ್ಭದಲ್ಲಿ ನಗರಸಭೆ ಮತ್ತು ನಗರಪಾಲಿಕೆಗಳಿಗೆ ಯಾವಾಗ ಚುನಾವಣೆ ಮಾಡುತ್ತೇವೆಂದು ಈ ಅಧಿದೇಶನದಲ್ಲಿಯೇ ಘೋಷಣೆ ಮಾಡುವುದು ಬಹಳ ಸೂಕ್ತ ಎಂದು ನಾನು ಬಹಳ ನಮ್ರತೆಯಿಂದ ಒತ್ತಾಯಪೂರ್ವಕವಾಗಿ ಹೇಳಬಯಸುತ್ತೇನೆ ಬೆಂಗಳೂರು ನಗರಪಾಲಿಕೆ ಬಗ್ಗೆ ಈ ಅಧಿವೇಶನದಲ್ಲಿಯೇ ಮಾರ್ಚ್ ಅಥವಾ ಏಪ್ರಿಲ್ ಒಂದರಿಂದ ಎರಡು ತಿಂಗಳೊಳಗೆ ಕಟ್ಟುನಿಟ್ಟಾಗಿ ಚುನಾವಣೆ ನಡೆಸುತ್ತೇವೆಂದು ಹೇಳಿದರೆ ಜನತೆಯ ಮನಸ್ಸಿನಲ್ಲಿ ಸರ್ಕಾರದ ಮೇಲೆ ಆತ್ಮೀಯ ನಂಬಿಕೆ ಬರುತ್ತದೆ. ಪ್ರಜಾಪ್ರಭುತ್ವ ವಿಷಯದಲ್ಲಿ ಮಾತ್ರವಲ್ಲ ನಂಬಿಕೆ ಬರುತ್ತದೆ. ಚುನಾವಣೆಗಳು ಅತ್ಯಂತ ವೇಗವಾಗಿ ಏತಕ್ಕೆ ಆಗಬೇಕೆಂದರೆ ನಾವು ಅಸೆಂಬ್ಲಿ ಮತ್ತು ಪಾರ್ಲಿಮೆಂಟ್ ಚುನಾವಣೆ ಸಂದರ್ಭದಲ್ಲಿ ಮತದಾರರನ್ನು ಮತ ಕೇಳಲು ಹೋದಾಗ ಮತದಾರರು ಕೇಳಿದಂಥ ಪ್ರಶ್ನೆ ಅಂದರೆ ಒಬ್ಬ ನಗರಸಭೆಯ ಸದಸ್ಯ ಮಾಡಬೇಕಾದ ಬಹಳಷ್ಟು ಕೆಲಸಗಳ ಬಗ್ಗೆ ನಮ್ಮನ್ನು ಕೇಳಿದರು. ಚರಂಡಿ ವ್ಯವಸ್ಥೆ, ಒಳಚರಂಡಿ ವ್ಯವಸ್ಥೆ ಬೀದಿ ದೀಪಗಳ ಕೊಳಾಯಿಗೆ ಸಂಬಂಧಪಟ್ಟಂತೆ ವಿಷಯಗಳನ್ನೇ ಜನರು ಹೆಚ್ಚಾಗಿ ಪ್ರಸ್ತಾಪ ಮಾಡುತ್ತಿದ್ದರು, ಈ ಕೆಲಸವನ್ನು ಅಸೆಂಬ್ಲಿ ಸದಸ್ಯನಾಗಿ ಪರಿಪೂರ್ಣತೆಯಿಂದ ಜನತೆಯ ಮನಸ್ಸನ್ನು ಓಲೈಸುವ ರೀತಿಯಲ್ಲಿ ಸೇವೆ ಮಾಡಲಿಕ್ಕೆ ಸಾಧ್ಯವಿಲ್ಲ. ಇವೊತ್ತು ಜನತೆಗೆ ನೇರವಾಗಿ ಸೇವೆಯನ್ನು ಮಾಡಬೇಕಾದರೆ ಜನತೆಯ ಮನಸ್ಸು ಒಪ್ಪುವಂತೆ ಆಗಬೇಕಾದರೆ, ನಗರದ ನಾಗರೀಕರಿಗೆ ಅನುಕೂಲವಾಗಬೇಕಾದರೆ, ನಗರಸಭೆಯ ಸದಸ್ಯರುಗಳಿಂದ ಮಾತ್ರ ಸಾಧ್ಯ ಎಂದು ಹೇಳಬಯಸುತ್ತೇನೆ. ವಿಧಾನಸಭೆಯ ಸದಸ್ಯನಾಗಿ ಲೆಜಿಸ್ಲೇಷನ್ ವಿಷಯದಲ್ಲಿ ಮಾತನಾಡಬಹುದು, ಕೆಲವೊಂದು ಪಾಲಿಸಿ ವಿಷಯಗಳ ಬಗ್ಗೆ ಮಾತನಾಡಬಹುದು ರಾಜ್ಯಮಟ್ಟದ

ಅಭಿವೃದ್ಧಿಗೆ ಕಾರ್ಯಕ್ರಮಗಳನ್ನು ಹಾಕಿಕೊಂಡು ಹೋಗಬಹುದು. ನೇರವಾಗಿ ಜನಸಾಮಾನ್ಯರಿಗೆ ಪೌರಸೌಲಭ್ಯ ಒದಗಿಸಬೇಕೆಂದರೆ ಕೇವಲ ಚುನಾಯಿತ ನಗರಸಭೆ ಸದಸ್ಯರಿಂದ ಮಾತ್ರ ಸಾಧ್ಯ. ಎಂತಹ ಪ್ರಮುಖ ಆಡಳಿತಾಧಿಕಾರಿ ನಗರಸಭೆಯಲ್ಲಿ ಇದ್ದರೂ ಕೂಡ ಆತ ಸರ್ಕಾರದ ಒಂದು ನೇರವಾದ ರೆಪ್ರೆಸೆಂಟೇಟೀವ್ ಆಗುತ್ತಾನೆಯೇ ವಿನಹ ಜನತೆಯ ರೆಪ್ರೆಸೆಂಟೇಟೀವ್ ಆಗಲಿಕ್ಕೆ ಸಾಧ್ಯ ಇಲ್ಲ.

ಆದ್ದರಿಂದ ನನ್ನ ಬಹುಕಾಲದ ಅನುಭವದಿಂದ ಹೇಳುತ್ತಿದ್ದೇನೆ. ನಗರಸಭೆಯ ಆಡಳಿತಾಧಿಕಾರಿಯೇ ಆಗಿರಲಿ, ಅಥವಾ ಬೇರೆ ಅಧಿಕಾರಿಯೇ ಆಗಿರಲಿ ಎಷ್ಟೇ ಒಳ್ಳೆಯ ಅಭಿಪ್ರಾಯದಿಂದ ಸರ್ಕಾರದಿಂದ ನೇಮಕವಾಗಿದ್ದರೂ ಕೂಡ ನಗರದ ನಾಗರೀಕರಿಗೆ ನೇರವಾಗಿ ಸೇವೆಯನ್ನು ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಈ ಸರ್ಕಾರವಾಗಲಿ ಶಾಸನಸಭಾ ಸದಸ್ಯರಾಗಲಿ ಒಳ್ಳೆಯ ಹೆಸರನ್ನು ತೆಗೆದುಕೊಳ್ಳಬೇಕಾದರೆ ಮೊದಲು ಅಂದರೆ ಆದಷ್ಟು ಬೇಗನೆ ನಗರಸಭೆಗಳಿಗೆ ಚುನಾವಣೆಗಳನ್ನು ನಡೆಸಬೇಕು. ಈಗ ಏನು ತಿದ್ದುಪಡಿಯನ್ನು ಸರ್ಕಾರ ತಂದಿದೆ ಇದು ಸಮಂಜಸವಾಗಿರುತ್ತದೆ. ನಗರಸಭೆಗಳಿಗೆ ಅಥವಾ ಈ ಬೆಂಗಳೂರು ನಗರಸಭೆಗೆ ಯಾವಾಗ ಚುನಾವಣೆಯನ್ನು ಮಾಡಲಾಗುತ್ತದೆಂಬ ಬಗ್ಗೆ ಮಾನ್ಯ ಮಂತ್ರಿಗಳನ್ನು ಕೇಳಬಯಸುತ್ತೇನೆ.

ಇನ್ನೊಂದು ವಿಚಾರ ಹಿಂದೆ ನಡೆದಂಥ ಆಲ್ ಇಂಡಿಯಾ ಮೇಯರ್ಸ್ ಕಾನ್ಫೆರೆನ್ಸ್‌ನಲ್ಲಿ ಬಹಳಷ್ಟು ಚರ್ಚೆಗಳು ನಡೆದು ಸಾಕಷ್ಟು ರೆಕಮೆಂಡೇಷನ್‌ಗಳನ್ನು ಮಾಡಲಾಗಿದೆ, ಆದರೆ ಆ ಎಲ್ಲಾ ರೆಕಮೆಂಡೇಷನ್‌ಗಳೂ ಕೇವಲ ಪೇಪರ್ ಮೇಲೆಯೇ ಉಳಿದು ಹೋಗಿವೆ. ಇತ್ತೀಚೆಗೆ ಮಾನ್ಯ ರಾಜೀವ್ ಗಾಂಧಿಯವರೂ ಕೂಡ ಬಹಳ ಒಳ್ಳೆಯ ಸಲಹೆಯನ್ನು ಮಾಡಿದ್ದಾರೆ. ಆಲ್ ಇಂಡಿಯಾ ಲೆವೆಲ್‌ನಲ್ಲಿ ಒಂದು ನ್ಯಾಷನಲ್ ಪಾಲಿಸಿಯನ್ನು ಮಾಡಬೇಕು, ಇಡೀ ರಾಷ್ಟ್ರದಲ್ಲಿ ಎಲ್ಲರಿಗೂ ಒಂದೇರೀತಿಯ ಪೌರ ಸೌಲಭ್ಯಗಳನ್ನು ಒದಗಿಸಿಕೊಡಬೇಕು, ಅವರ ಹಕ್ಕುಬಾಧ್ಯತೆಗಳನ್ನು ಅವರಿಗೆ ಒದಗಿಸಿಕೊಡಬೇಕು ಎಂದು ಇದನ್ನು ಗಮನದಲ್ಲಿಟ್ಟುಕೊಂಡು ನಮ್ಮ ಸರ್ಕಾರ ಕೆಲಸಮಾಡಲು ಮುಂದೆಬರಬೇಕೆಂದು ಕೇಳಿಕೊಂಡು ಇವತ್ತು ಈ ಸದನದ ಮುಂದೆ ಏನೊಂದು ತಿದ್ದುಪಡಿಯನ್ನು ಮಂಡಿಸಲಾಗಿದೆ ಇದಕ್ಕೆ ಸದನದ ಎಲ್ಲಾ ಶಾಸಕರದ್ದೂ ಒಮ್ಮತವಿದೆಯೆಂದು ಹೇಳಿ ಇಷ್ಟು ಮಾತನಾಡಲು ನನಗೆ ಅವಕಾಶ ಕೊಟ್ಟಂಥ ಮಾನ್ಯ ಸಭಾಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಹರ್ಷಕುಮಾರ ಗೌಡ (ಚಾಮರಾಜ).—ಸನ್ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಮಂತ್ರಿಗಳು ಈ ಸದನದ ಮುಂದೆ ಏನೊಂದು ತಿದ್ದುಪಡಿಯನ್ನು ಮಂಡಿಸಿದ್ದಾರೆ? ಇದನ್ನು ನಾನು ಪ್ರಥಮವಾಗಿ ಸ್ವಾಗತಿಸುತ್ತೇನೆ, ನಾನು ನಗರಸಭಾ ಸದಸ್ಯನಾಗಿದ್ದು ಈಗ ಇಲ್ಲಿಗೆ ಶಾಸಕನಾಗಿ ಬಂದಿದ್ದೇನೆ. ನಗರಸಭೆ ಮತ್ತು ನಗರಪಾಲಿಕೆಗಳ ಚುನಾವಣೆಯನ್ನು ನಡೆಸುವ ಸಂದರ್ಭದಲ್ಲಿ ಏನು ಸಮಸ್ಯೆಗಳು ಎದುರಾಗಂತ್ತವೆ ಮತ್ತು ಆ ಸಮಸ್ಯೆಗಳನ್ನು ನಿವಾರಿಸಲು ಸರ್ಕಾರ ಏನು ನೀತಿ ನಿರ್ಧಾರಗಳನ್ನು ಕೈಗೊಳ್ಳಬೇಕೆಂಬ ಬಗ್ಗೆ ನಾನು ಒಂದೆರಡು ಸಲಹೆಗಳನ್ನು ಕೊಡಬಯಸುತ್ತೇನೆ.

ಪ್ರಥಮವಾಗಿ ಹೇಳಂವುದೇನೆಂದರೆ ಹಿಂದೆ ಅಧಿಕಾರದಲ್ಲಿದ್ದಂಥ ಸರ್ಕಾರ ಏನಿತ್ತು ಅದು ತನಗೆ ಬೇಕಾದಂಥ ರೀತಿಯಲ್ಲಿ ಕ್ಷೇತ್ರಗಳನ್ನು ಮರು ವಿಂಗಡಣೆ ಮಾಡಿಕೊಂಡಿತ್ತು. ಅಲ್ಪಸಂಖ್ಯಾತ ಜನ ಎಲ್ಲಿದ್ದರು, ಹರಿಜನ-ಗಿರಿಜನರು ಎಲ್ಲಿದ್ದರು ಆ ಮತ ಕ್ಷೇತ್ರಗಳನ್ನು ಪ್ರಬಲ ಕೋಮಿನ ಜನರು ಒಡೆದು ತಮಗೆ ಬೇಕಾದ ರೀತಿಯ ಲ್ಲಿ ತಮಗೆ ಅನುಕೂಲವಾಗುವ ರೀತಿಯಲ್ಲಿ ಮತ ಕ್ಷೇತ್ರದ ಮರು ವಿಂಗಡಣೆಯನ್ನು ಮಾಡಿದ್ದರು. ಈ ರೀತಿ ಮಾಡಿ ಆ ಮತಕ್ಷೇತ್ರದ ಜನರ ಹಕ್ಕನ್ನು ಕಸಿದುಕೊಳ್ಳುವ ಕೆಲಸಮಾಡಿದ್ದಾರೆ. ಅವರಿಗೆ ವಂಚನೆ ಮಾಡಿದ್ದಾರೆ. ಮಾಡಿರತಕ್ಕ ಮತದಾನದ ಕ್ಷೇತ್ರ ಮರು ವಿಂಗಡಣೆಯ ಕೆಲಸವೂ ಕೂಡ ಸಮರ್ಪಕವಾದ ರೀತಿಯಲ್ಲಿಲ್ಲ. ಏಕೆಂದರೆ ಒಬ್ಬರ ಮತಕ್ಷೇತ್ರದಲ್ಲಿ ೩೦ ಸಾವಿರ ಮತದಾರರಿದ್ದರೆ ಇನ್ನೊಂದು ಕ್ಷೇತ್ರದಲ್ಲಿ ೫ ಸಾವಿರ ಮತದಾರರಿದ್ದಾರೆ. ಈ ವ್ಯತ್ಯಾಸವನ್ನು ನಿವಾರಣೆ ಮಾಡಬೇಕು. ಇದರ ಜೊತೆಗೆ ಹಿಂದಿನ ಸರ್ಕಾರದವರು ಮುನಿಸಿಪಲ್ ಚುನಾವಣೆಗಳನ್ನು ನಾವು ಮಾಡಿದ್ದೇವೆಂದು ಘೋಷಣೆಯನ್ನು ಹಾಕಿದ್ದಾರೆ. ಸ್ವಾಮಿ, ನಾನು ತಮ್ಮ ಮೂಲಕ ಒಂದು ಮಾತನ್ನು ಕೇಳಬಯಸುತ್ತೇನೆ. ನಗರಸಭೆಗಳಿಗೆ ಅಥವಾ ಸ್ಥಳೀಯ ಸಂಸ್ಥೆಗಳಿಗೆ ಇವರು ಹಾಕಿದ ಬಂಡವಾಳದಲ್ಲಿ ಅಲ್ಲಿನ ಜನರಿಗೆ ಎಷ್ಟರಮಟ್ಟಿಗೆ ಉಪಯೋಗವಾಗಿದೆ ಎಂಬುದನ್ನು ಹೇಳಬೇಕು.

೧೦-೧೫ ಪಿ.ಎಂ.

ವಿಕೇಂದರೆ, ಜನರು ಕೊಡತಕ್ಕಂಥ ಕಂದಾಯದಿಂದ ಈ ಒಂದಂ ವ್ಯವಸ್ಥೆಗೆ ಸಹಾಯವಾಗಂತ್ತದೆ ಅದನ್ನು ಸದ್ವಿನಿಯೋಗ ಮಾಡಬೇಕು. ಅದಕ್ಕೆ ಬದಲಾಗಿ ಈ ರಾಜ್ಯವನ್ನು ಆಳಿದಂಥ ಮಂತ್ರಿಗಳಲ್ಲಿ ದ್ವಂದ್ವವಾಗಿ ಹಣವನ್ನು ಖರ್ಚು ಮಾಡಿದಂಥ ಜನರು ಇದ್ದಾರೆ. ಇಂಥ ಒಂದು ವ್ಯವಸ್ಥೆಗೆ ಕಾರಣವಾದಂಥ ಆಡಳಿತ

ವನ್ನು ಸರಿಪಡಿಸುವುದಕ್ಕೆ ಸರ್ಕಾರ ಪ್ರಯತ್ನ ಮಾಡಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ. ಅಲ್ಪಸಂಖ್ಯಾತರು ಬಡವರು ಎಲ್ಲಾ ಜನರು ಕಾಂಗ್ರೆಸ್ ಪಕ್ಷಕ್ಕೆ ಆಶೀರ್ವಾದವನ್ನು ಮಾಡಿದ್ದಾರೆ. ನಾನಾದರೂ ಹೇಳುತ್ತೇನೆ ಇನ್ನೂ ಹೆಚ್ಚಿಗೆ ಆ ಜನರ ಆಶೀರ್ವಾದವನ್ನು ಪಡೆಯಬೇಕಾದರೆ ಯಾರು ಆಡಳಿತವನ್ನು ನಡೆಸುತ್ತಾರೆ ಆ ಜನ ನಗರಪ್ರದೇಶಗಳಲ್ಲಿ ಕನಿಷ್ಟ ಸೌಲಭ್ಯ ನೀರಿನ ಸೌಲಭ್ಯ ಕೊಡಬೇಕು. ರಸ್ತೆಗಳ ಸೌಕರ್ಯವನ್ನು ಕೊಡಬೇಕು ಆಸ್ಪತ್ರೆಗಳ ಸೌಲಭ್ಯಗಳನ್ನು ಕೊಡಬೇಕು. ತಾವೂ ಇದೆಲ್ಲವನ್ನು ಗಮನದಲ್ಲಿಟ್ಟುಕೊಳ್ಳಬೇಕು. ಯಾವ ಜನ ಆದರಲ್ಲೂ ನಗರಪ್ರದೇಶಗಳಲ್ಲಿರತಕ್ಕಂಥ ಅಕ್ಕತಂಗಿಯರು ನೀರಿನ ಬರವನ್ನು ಅನುಭವಿಸುತ್ತಿರುತ್ತಾರೆ ಅವರ ಬರವನ್ನು ನಿವಾರಣೆ ಮಾಡಬೇಕು. ಮೈಸೂರು ಬೆಂಗಳೂರು ನಗರದಲ್ಲಿ ಪ್ರತಿನಿತ್ಯ ಇಂಥ ಒಂದು ತೊಂದರೆಯನ್ನು ಅನುಭವಿಸುತ್ತಿರುವುದನ್ನು ನಾವು ನೋಡುತ್ತಿರುತ್ತೇವೆ. ತವಿುಳುನಾಡಿಗೆ ಕಾವೇರಿ ನೀರನ್ನು ಕೊಡುವಂಥ ಜವಾಬ್ದಾರಿಯನ್ನು ಹೊತ್ತು ನಮ್ಮ ಮೈಸೂರು ಜಿಲ್ಲೆಗೆ ನೀರನ್ನು ಪೂರೈಸಲು ವ್ಯವಸ್ಥೆಯನ್ನು ಮಾಡದೆ ಆದನ್ನು ಮಾಡಿಸಿಕೊಡದೆ ಇರತಕ್ಕಂಥ ದೋರಣೆ ಏನು ಇದೆ ಅದನ್ನು ಸರಿಪಡಿಸಬೇಕಾದ್ದು ಸರ್ಕಾರದ ಕರ್ತವ್ಯವೆಂದು ಮಾನ್ಯ ಮಂತ್ರಿಗಳಿಗೆ ಒತ್ತಾಯ ಮಾಡುತ್ತೇನೆ ನಗರಸಭೆಗಳಿಗೆ ಆದಷ್ಟು ಜಾಗ್ರತೆಯಾಗಿ ಚುನಾವಣೆಗಳನ್ನು ಮಾಡಬೇಕಲ್ಲದೆ ನಗರ ಪ್ರದೇಶದ ಜನರಿಗೆ ಸ್ಪಂದಿಸತಕ್ಕಂಥ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂದು ಒತ್ತಾಯಪೂರ್ವಕವಾಗಿ ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಬಿ.ಎಂ.ಇದಿನಬ್ಬ (ಉಳ್ಳಾಲ).—ಸನ್ಮಾನ್ಯ ಅಧ್ಯಕ್ಷರೇ ಕಾನೂನು ಮಂತ್ರಿಗಳಾದಂಥ ಮಾನ್ಯ ವೀರಪ್ಪ ಮೊಯಲಿಯವರು ತಂದಿರತಕ್ಕಂಥ ತಿದ್ದುಪಡಿಯನ್ನು ಸ್ವಾಗತಿಸುತ್ತಾ ಒಂದೆರಡು ವಿಷಯಗಳನ್ನು ಹೇಳಲು ಅಪೇಕ್ಷೆ ಪಡುತ್ತೇನೆ. ಮಹಾನಗರಪಾಲಿಕೆ, ಮತ್ತು ಪುರಸಭೆಗಳ ಚುನಾವಣೆಗಳು ಆದಷ್ಟು ಜಾಗ್ರತೆಯಾಗಿ ಆಗಬೇಕೆಂದು ಸರ್ಕಾರದವರು ಈಗ ಮಂಡಿಸಿರತಕ್ಕಂಥ ವಿಚಾರ ಸಭ್ಯವಾದ ವಿಚಾರ. ಏತಕ್ಕೆಂದರೆ ಪ್ರಜಾಪ್ರಭುತ್ವದಲ್ಲಿ ಚುನಾವಣೆಗಳು ನಡೆಯಬೇಕು. ಚುನಾಯಿತ ಪ್ರತಿನಿಧಿಗಳಿಂದ ನಡೆಸತಕ್ಕ ಆಡಳಿತ ಯಾವಾಗಲು ಪ್ರಜಾಪ್ರಭುತ್ವಕ್ಕೆ ಒಪ್ಪುವಂಥ ಒಂದು ಒಳ್ಳೆಯ ವಿಚಾರ. ಅಧಿಕಾರಿಗಳು ಮಾಡುವಂಥ ಆಡಳಿತ ಹೇಗಿರುತ್ತದೆಂದರೆ ಒಮ್ಮೊಮ್ಮೆ ನಿಂತನೀರಿನಂತಿರುತ್ತದೆ ನಿಂತನೀರು ಹೆರಿದುಹೋಗಿ ಪರಿಶುದ್ಧವಾಗಿರಬೇಕು. ಅಂತೆಯೇ ಪ್ರಜಾಪ್ರಭುತ್ವದಲ್ಲಿ ಚುನಾಯಿತ ಪ್ರತಿನಿಧಿಗಳಿಂದ ಆಡಳಿತವನ್ನು ನಡೆಸುವುದು ಬಹಳ ಮುಖ್ಯ. ಆದನ್ನು ಸರ್ಕಾರದವರು ಕಂಡುಕೊಂಡು ಆದಷ್ಟು ಜಾಗ್ರತೆ ೧–೨ ತಿಂಗಳಲ್ಲಿ ಚುನಾವಣೆಗಳನ್ನು ಮಾಡತಕ್ಕಂಥ ವ್ಯವಸ್ಥೆಯನ್ನು ಮಾಡುತ್ತೀರೆನ್ನುವ ಭಾವನೆ ನನಗಿದೆ. ಆದರೆ ಇದೇ ಸಂದರ್ಭದಲ್ಲಿ ಜಿಲ್ಲೆಗಳಲ್ಲಿ ಇರತಕ್ಕಂಥ ತೊಂದರೆಗಳನ್ನು ಆಲೋಚನೆ ಮಾಡಿದರೆ ತುಂಬಾ ಭಯಾನಕವಾಗಿರುತ್ತದೆ. ಕ್ಷೇತ್ರ ವಿಂಗಡನೆಯನ್ನು ಮಾಡುವಾಗ ಅನೇಕ ಲೋಪ ದೋಷಗಳು ನಡೆದಿರುತ್ತವೆ. ಅಲ್ಪಸಂಖ್ಯಾತರು ಗೆದ್ದುಬರುವಂಥ ಸ್ಥಳಗಳಲ್ಲಿ ಅವರಿಗೆ ತೊಂದರೆಯಾಗುವಹಾಗೆ ಮಾಡಿರುತ್ತಾರೆ. ಅದೇ ರೀತಿಯಲ್ಲಿ ಪರಿಶಿಷ್ಟಜಾತಿ ಮತ್ತು ಪಂಗಡದವರು ಗೆದ್ದು ಬರುವಂಥ ಸ್ಥಳಗಳಲ್ಲಿ ಅವರಿಗೆ ತೊಂದರೆಯಾಗುವ ರೀತಿಯಲ್ಲಿ ಕ್ಷೇತ್ರ ವಿಂಗಡಣೆಯನ್ನು ಮಾಡಿರುತ್ತಾರೆ. ಪಂಚಿಹಳ್ಳಿಯರು ಗೆದ್ದು ಬರುವ ಕಡೆಗಳಲ್ಲೂ ತೊಂದರೆಯಾಗಿದೆ. ಈ ರೀತಿ ವಿಂಗಡಣೆಯಾಗಿರುವುದನ್ನು ಸರಿಪಡಿಸುವುದು ಬಹಳ ಮುಖ್ಯವಾಗಿದೆ. ಏತಕ್ಕೆಂದರೆ ದೂರದೃಷ್ಟಿ ಇಲ್ಲದೆ ಕ್ಷೇತ್ರ ವಿಂಗಡಣೆ ಮಾಡಿದರೆ ಅಲ್ಪಸಂಖ್ಯಾತರು ಗೆದ್ದು ಬರುವುದಕ್ಕೆ ಬಹಳ ಕಷ್ಟವಾಗುತ್ತದೆ. ಇವತ್ತಿನ ವಿಧಾನ ಸಭೆಗೆ ತಯಾರು ಮಾಡಿರತಕ್ಕಂಥ ಓಟರ್‌ಲಿಸ್ಟನ್ನು ನೋಡಿದರೆ ಬಹಳ ಭಯನಕವಾಗಿರುತ್ತದೆ. ಅನೇಕ ಜನರ ಹೆಸರುಗಳು ಬಿಟ್ಟುಹೋಗಿರುವುದನ್ನು ಇದರಲ್ಲಿ ನಾವು ನೋಡಬಹುದು. ಕೆಲವು ಕಡೆಗಳಲ್ಲಿ ಮುಸ್ಲಿಂ ಅಲ್ಪ ಸಂಖ್ಯಾತರು, ಕ್ರಿಶ್ಚಿಯನ್ನರು ಮುಂತಾದ ಜಾತಿಯವರನ್ನು ಬಿಟ್ಟು ಬಿಟ್ಟಿದ್ದಾರೆ. ಆದನ್ನು ಲೆಕ್ಕ ಹೆಗೆದರೆ ದೊಡ್ಡ ಪಟ್ಟಿಯೇ ಉಂಟು. ಇದನ್ನು ನಾವು ಸರಿಪಡಿಸಬೇಕಾಗಿದೆ. ಆದ್ದರಿಂದ ಳ ವರ್ಷ ಇದ್ದುದನ್ನು ಶಿ ವರ್ಷ ಎಂದು ಮಾಡಿದ್ದುದು ಒಳ್ಳೆಯ ಸಂಗತಿ. ಈ ಒಂದು ಸದನದಲ್ಲಿ ಚುನಾವಣೆಯನ್ನು ಯಾವಾಗ ಮಾಡುತ್ತೀರೆಂದು ಘೋಷಣೆ ಮಾಡಬೇಕೆಂದು ನಾನು ಹೇಳುವುದಿಲ್ಲ. ಇನ್ನು ಎರಡು ತಿಂಗಳೊಳಗೆ ಖಂಡಿತ ಮಾಡುತ್ತೀರಿ, ಅದಕ್ಕಾಗಿ ತಿದ್ದುಪಡಿ ತಂದಿದ್ದೀರಿ. ಆ ಒಂದು ಕಳಕಳಿ ಸರ್ಕಾರದಲ್ಲಿ ಇದ್ದುದರಿಂದ ಕಾನೂನು ಮಂತ್ರಿಗಳ ತಿದ್ದುಪಡಿಯನ್ನು ತಂದಿದ್ದಾರೆ. ಆದುದರಿಂದ ಈ ತಿದ್ದುಪಡಿಯನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ.

ಶ್ರೀ ಗುಜ್ಜಾಲ ಹನುಮಂತಪ್ಪ (ಹೊಸಪೇಟೆ).—ಮಾನ್ಯ ಸಭಾಧ್ಯಕ್ಷರೇ, ನಗರಸಭೆ ಮತ್ತು ಪುರಸಭೆ ಬಗ್ಗೆ ತಿದ್ದುಪಡಿ ಮಸೂದೆಯನ್ನು ತಂದದ್ದು ಬಹಳ ಸೂಕ್ತ. ಆದನ್ನು ನಾನು ಸ್ವಾಗತಿಸುತ್ತೇನೆ. ಹೊಸಪೇಟೆ ನಗರಸಭೆ ಬಹಳ ದೊಡ್ಡದಾಗಿದ್ದು ಅದರ ಜನಸಂಖ್ಯೆ ಸುಮಾರು ಒಂದು ಲಕ್ಷದವರೆಗೆ ಇದೆ. ಆದರೆ ಕಾರಣಾಂತರದಿಂದ ೧೫–೧೬ ಜನಸಂಖ್ಯೆ ಇರತಕ್ಕ ಏರಿಯಾಕ್ಕೆ ೩ ಸ್ಥಾನಗಳು ಇವೆ. ಕೆಲವು ಕಡೆ ಆರು ಸ್ಥಾನಗಳು ಇರತಕ್ಕ ಏರಿಯಾಕ್ಕೆ ೩ ಸ್ಥಾನಗಳನ್ನು ಕೊಟ್ಟಿದ್ದಾರೆ. ಇದು ಸರಿಯಾದ

ಮಾರ್ಗವಲ್ಲ. ಆದ್ದರಿಂದ ಅಲ್ಲಿನ ಜನಸಂಖ್ಯೆಯ ಆಧಾರದ ಮೇಲೆ ಸ್ಥಾನಗಳನ್ನು ನೋಡಿ ಸರಿಪಡಿಸ ಬೇಕು. ಚುನಾವಣೆ ಆಗುವುದರೊಳಗೆ ಅದನ್ನು ಸರಿಪಡಿಸಬೇಕೆಂದು ಸಂಬಂಧಪಟ್ಟ ಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ನಮ್ಮ ನಗರಸಭೆಯವರು ಒಳಚರಂಡಿ ವ್ಯವಸ್ಥೆಗೆ ೧೫-೨೦ ವರ್ಷಗಳ ಹಿಂದೆ ಯೋಜನೆಯನ್ನು ತಯಾರಿಸಿದ್ದಾರೆ. ಇವತ್ತಿನವರೆಗೆ ಅದನ್ನು ಕಾರ್ಯಗತ ಮಾಡಿಲ್ಲ. ಆ ಚರಂಡಿ ನೀರನ್ನು ಎತ್ತಿ ದೂರ ಸಾಗಿಸುವುದಕ್ಕೆ ಪಂಪುಸೆಟ್ಟು ಹಾಕಿದ್ದಾರೆ. ಅವು ಇವೊತ್ತಿನವರೆಗೆ ಕಾರ್ಯ ಮಾಡಿಲ್ಲ. ಅದರ ಮೇಲೆ ವಿದ್ಯುಚ್ಛಕ್ತಿ ಬಿಲ್ಲು ೨೫ ಲಕ್ಷ ರೂಪಾಯಿಗಳವರೆಗೆ ಆಗಿದೆ. ಸುಮ್ಮನೆ ನಗರಸಭೆಗೆ ಅದು ಭಾರವಾಗಿದೆ ಇದುವರೆಗೆ ಪ್ರಾರಂಭವಾಗದೆ ಇರತಕ್ಕ ನಗರಸಭೆಯ ಒಳಚರಂಡಿ ಯೋಜನೆಯನ್ನು ಮುಂದಾದರೂ ಪ್ರಾರಂಭ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಈ ನಗರ ಸಭೆಯ ಚುನಾವಣೆ ಒಳಗೆ ಜನಸಂಖ್ಯೆಯ ಆಧಾರದ ಮೇಲೆ ಸ್ಥಳಗಳನ್ನು ಹೊಂದಾಣಿಕೆ ಮಾಡಬೇಕಾಗಿ ತಮ್ಮಲ್ಲಿ ಮನವಿ ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎ.ಎಂ. ಹಿಂಡಸಗೇರಿ.—ಮಾನ್ಯ ಕಾನೂನು ಸಚಿವರು ತಂದಿರತಕ್ಕ ತಿದ್ದುಪಡಿಯನ್ನು ಸ್ವಾಗತ ಮಾಡಿ ಒಂದು ಸಲಹೆ ಕೊಡುವುದಕ್ಕೆ ಇಷ್ಟಪಡುತ್ತೇನೆ. ಅನೇಕ ಮಾನ್ಯ ಸದಸ್ಯರು ಡಿವಿಜನ್ ಬಗ್ಗೆ ಮಾತನಾಡಿದ್ದಾರೆ. ನಮ್ಮ ಪರಿಸ್ಥಿತಿ ಹೇಗಿದೆ ಎಂದರೆ ಕಾರ್ಪೊರೇಷನ್‌ನಲ್ಲಿ ಒಂದು ಕಡೆ ಎರಡು ಡಿವಿಜನ್ ಇದ್ದರೆ ಮತ್ತೊಂದು ಕಡೆ ೧೫ ಡಿವಿಜನ್ ಇದೆ. ಅಲ್ಪ ಸಂಖ್ಯಾತರು, ಹಿಂದುಳಿದ ವರ್ಗದವರು ಕೊಳಚೆ ಪ್ರದೇಶಗಳಲ್ಲಿ ಇದ್ದವರಿಗೆ ಸ್ಥಾನಮಾನ ಸಿಗಲಿಲ್ಲವೆಂದು ಅನೇಕ ಸದಸ್ಯರು ಹೇಳಿದ್ದಾರೆ. ಆದರ ಬಗ್ಗೆ ಸರ್ಕಾರ ವಿಶೇಷ ಗಮನ ಕೊಡಬೇಕು. ಮಲ್ಟಿ ಪರ್ಪಸ್ ಡಿವಿಜನ್ ಮಾಡಿದರೆ ಹಿಂದುಳಿದವರಿಗೆ ಅಲ್ಪ ಸಂಖ್ಯಾತರಿಗೆ ಸಹಾಯವಾಗುತ್ತದೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಸರ್ಕಾರದವರು ನಗರಸಭೆಗಳಿಗೆ ಚುನಾವಣೆ ಮಾಡುವ ಘೋಷಣೆ ಮಾಡಿದರೆ ಖುಷಿತ ಸ್ವಾಗತಿಸುತ್ತೇನೆ. ವಿಂಗಡಣೆ ಮಾಡುವ ಕಾಲಕ್ಕೆ ಮಲ್ಟಿ ಪರ್ಪಸ್ ಕ್ಷೇತ್ರ ಮಾಡಿದರೆ ಎಲ್ಲರಿಗೂ ಸಹಾಯವಾಗುತ್ತದೆ.

ಅಧ್ಯಕ್ಷರು.—ಮಲ್ಟಿ ಮೆಂಬರ್‌ಶ್ಯೀ ಅಥವಾ ಮಲ್ಟಿ ಪರ್ಪಸ್ಶೀ ?

ಶ್ರೀ ಎ.ಎಂ.ಹಿಂಡಸಗೇರಿ.—ಕ್ಷಮಿಸಿ, ತಮಗೆ ಧನ್ಯವಾದಗಳು. ಮಲ್ಟಿಮೆಂಬರ್ ಕಾನ್ಸ್ಟಿಟ್ಯೂಯೆನ್ಸಿ ಮಾಡಿದರೆ ಎಲ್ಲರಿಗೂ ಪ್ರಾತಿನಿಧ್ಯ ಕೊಡಲು ಸಾಧ್ಯವಾಗುತ್ತದೆ. ಹಿಂದೆ ಅಲ್ಪ ಸಂಖ್ಯಾತರು, ಹಿಂದುಳಿದವರು ಮತ್ತು ಬೇರೆ ಸಮಾಜದವರಿಗೆ ಸ್ಥಾನಮಾನ ಸಿಗುತ್ತಿತ್ತು. ಅದೇ ಒಂದು ಸೌಲಭ್ಯ ವನ್ನು ಕಲ್ಪಿಸಲು ಮಲ್ಟಿ ಮೆಂಬರ್ ಕಾನ್ಸ್ಟಿಟ್ಯೂಯನ್ಸಿ ಮಾಡಬೇಕೆಂದು ಸಲಹೆ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಹೆಚ್.ಪಿ.ಬಸವರಾಜ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಯವರು ಏನೂ ಒಂದು ತಿದ್ದುಪಡಿ ಕಾನೂನು ತಂದಿದ್ದಾರೆ ಅದನ್ನು ಸ್ವಾಗತಿಸುತ್ತಾ ಒಂದು ಸಲಹೆ ಕೊಡಬಯಸುತ್ತೇನೆ. ಹಿಂದಿನ ಸರ್ಕಾರ ಪುರಸಭೆಯನ್ನು ಮಂಡಲ ಪಂಚಾಯಿತಿಯನ್ನಾಗಿ ಮಾಡುವಾಗ ಅದಕ್ಕೆ ಜನಸಂಖ್ಯೆಯ ಮಿತಿಯನ್ನು ೧೦ ಸಾವಿರ ಎಂದು ಇಟ್ಟಿದೆ. ಆದೇ ಮಂಡಲ ಪಂಚಾಯಿತಿಗೆ ೧೧೫೮೦ ಎಂದು ಇದೆ.

ಅಧ್ಯಕ್ಷರು.—ಆ ಬಗ್ಗೆ ಬಹಳ ಮಂದಿ ಸದಸ್ಯರು ಹೇಳಿದ್ದಾರಲ್ಲ.

ಶ್ರೀ ಹೆಚ್.ಪಿ.ಬಸವರಾಜ್.—ಆ ಪರಿಮಿತಿಯನ್ನು ಹೋಗಲಾಡಿಸಿ ಪುರಸಭೆಯ ಮಿತಿಯನ್ನು ಜಾಸ್ತಿ ಮಾಡಬೇಕೆಂದು ಸಲಹೆ ಕೊಡುತ್ತಾ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಶಿವಾನಂದ ಎಚ್. ಕೌಜಲಗಿ.—ಮಾನ್ಯ ಅಧ್ಯಕ್ಷರೇ, ಒಂದು ಸಲಹೆ ಏನೆಂದರೆ ಮಹಿಳೆಯರಿಗೆ ೨೫ ಸ್ಥಾನಗಳನ್ನು ಕೊಡುತ್ತೇವೆ ಎಂದು ನಾವಾದರೂ ಹೇಳಿದ್ದೇವೆ, ಆಡಳಿತ ಪಕ್ಷದವರೂ ಆಶ್ವಾಸನೆ ಕೊಟ್ಟಿದ್ದಾರೆ. ಅದರ ಸಲುವಾಗಿ ಆಕ್ಟ್‌ನಲ್ಲಿ ಅಮೆಂಡ್‌ಮೆಂಟ್ ಮಾಡಬೇಕು. ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿಯಲ್ಲಿ ಯಾವ ಪ್ರಕಾರ ಮಹಿಳೆಯರಿಗೆ ೨೫ ಪರ್ಸೆಂಟ್ ಮೀಸಲಾತಿ ಇದೆ ಅದೇರೀತಿ ಮುನಿಸಿಪಾಲಿಟಿ ಮತ್ತು ಕಾರ್ಪೊರೇಷನ್‌ಗಳಲ್ಲಿ ಇಂತಿಂಥ ವಾರ್ಡ್‌ನಲ್ಲಿ ಮಹಿಳೆಯರಿಗೆ ಮೀಸಲಾತಿ ಎಂದು ತಿದ್ದುಪಡಿ ತರಬೇಕೆಂದು ಹೇಳುತ್ತೇನೆ.

ಶ್ರೀ ಎಂ. ಮಹದೇವ್.—ಮಾನ್ಯ ಅಧ್ಯಕ್ಷರೆ, ನಾನು ಜಾಸ್ತಿ ಟೈಮ್ ತೆಗೆದು ಕೊಳ್ಳುವುದಿಲ್ಲ, ಒಂದೇ ಒಂದು ಸಲಹೆಯನ್ನು ಕೊಡುತ್ತೇನೆ. ಪುರಸಭೆ ಮತ್ತು ನಗರಸಭೆಗಳಲ್ಲಿ ಅನಧಿಕೃತ ಬಡಾವಣೆಗಳಲ್ಲಿ ವಾಸವಾಗಿರತಕ್ಕ ಬಡವರುಗಳ ಹೆಸರುಗಳು ಮತದಾರರ ಪಟ್ಟಿಯಲ್ಲಿ ಬಿಟ್ಟುಹೋಗಿವೆ. ಅದನ್ನು ಮತದಾರರ ಪಟ್ಟಿಯಲ್ಲಿ ಸೇರಿಸಬೇಕು. ನಗರಸಭೆ ಮತ್ತು ಪುರಸಭೆ ಮ್ಯಾಪ್ಟಿಯಲ್ಲಿ ಅಕ್ಕಪಕ್ಕದಲ್ಲಿ ಎಕ್ಸ್‌ಟೆನ್ಷನ್ ಜಾಸ್ತಿಯಾಗಿವೆ. ನಗರದ ಮ್ಯಾಪ್ಟಿಯಲ್ಲಿ ಅನಧಿಕೃತವಾಗಿ ವಾಸವಾಗಿದ್ದವರೂ ಕೂಡ ಅವರುಗಳ ಹೆಸರನ್ನು ಸೇರಿಸಿಲ್ಲ. ಏಕೆಂದರೆ ಅವರು ವಾಸ ಮಾಡುವ ಸ್ಥಳ ಪುರಗಡಿಯಿಂದ ಹೊರಗಡೆ

ಇದೆ. ಇದರಿಂದ ಮತದಾರರ ಪಟ್ಟಿಯಲ್ಲಿ ಅವರ ಹೆಸರುಗಳಿಲ್ಲ. ಆದ್ದರಿಂದ ನಗರಸಭೆ ಮತ್ತು ಪುರಸಭೆಗಳಲ್ಲಿ ಪುರಗಡಿಯನ್ನು ವಿಸ್ತರಣೆ ಮಾಡಿ ವಾರ್ಡ್‌ನಲ್ಲಿ ಸೇರಿಸುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.— (ಕಾನೂನು, ವಾರ್ತಾ ಮಂತ್ರಿಗಳು) ಸನ್ಮಾನ್ಯ ಅಧ್ಯಕ್ಷರೆ, ಈ ಮಸೂದೆ ಬಗ್ಗೆ ಬಹಳ ವಿಚಾರ ಮಂಥನ ನಡೆದಿದೆ. ಬಹಳ ಒಳ್ಳೆಯ ಸಲಹೆಗಳು ಕೂಡ ಬಂದಿವೆ. ಒಂದು ವಿಚಾರ ಬಹಳ ಸ್ಪಷ್ಟ ಇದೆ. ಈ ಮಸೂದೆಗೆ ಯಾರದೂ ವಿರೋಧ ಇಲ್ಲ. ಏಕೆಂದರೆ ಇದು ಬಹಳ ಸರಳವಾದ ಮಸೂದೆ. ಮಾನ್ಯ ಯಡಿಯೂರಪ್ಪನವರು ಒಂದು ವಿಚಾರ ಹೇಳಿದರು ಇದನ್ನು ಡಿಲಿಟ್ ಮಾಡದೆ ಮತದಾರರ ಪಟ್ಟಿ ಪ್ರಕಾರ ಚುನಾವಣೆ ಮಾಡಬಹುದಾಗಿತ್ತು. ೧೮ ವರ್ಷದವರೂ ಈ ಪಟ್ಟಿಯಲ್ಲಿ ಸೇರಿದ್ದಾರೆ ಎಂದು ಹೇಳಿದರು. ಮೇಲ್ನೋಟಕ್ಕೆ ಅದನ್ನು ನಾನೂ ಒಪ್ಪುತ್ತೇನೆ. ಆದರೆ ಚುನಾವಣೆ ಘೋಷಣೆ ಮಾಡಿದಮೇಲೆ, ಚುನಾವಣಾ ಕಣಕ್ಕೆ ಇಳಿದಮೇಲೆ ಯಾರಾದರೂ ಕೋರ್ಟಿಗೆ ಹೋಗಬಹುದು. ಈ ಕಾಯಿದೆಯಲ್ಲಿ ಪ್ರಾವಿಷನ್ ಇರುವುದು ಮ್ಯಾಂಡೇಟರಿ. ಇದರ ಆಧಾರದ ಮೇಲೆ ಸರ್ಕಾರದವರು ಚುನಾವಣೆ ಘೋಷಣೆ ಮಾಡಿದರೆ ಯಾರಾದರೂ ಹೈಕೋರ್ಟಿಗೆ ಹೋಗಿ ಇಡೀ ಚುನಾವಣೆ ನಿಲ್ಲಿಸತಕ್ಕ ಸಂದರ್ಭವೂ ಇದೆ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಕಾನೂನು ಚೌಕಟ್ಟಿನಲ್ಲಿ ನಾನು ಪಂಡಿತನಲ್ಲ. ನಾನ ತಿಳಿದುಕೊಳ್ಳುವ ಪ್ರಯತ್ನ ಮಾಡುತ್ತಿದ್ದೇನೆ. ಹಿಂದೆ ೧೮ ವರ್ಷದವರಿಗೆ ನಗರಸಭೆ ಮತ್ತು ಪುರಸಭೆ ವ್ಯಾಪ್ತಿಯಲ್ಲಿ ಮತದಾನ ಮಾಡುವ ಅಧಿಕಾರವನ್ನು ಪೀಪಲ್ಸ್ ರೆಪ್ರಸೆಂಟೇಟೀವ್ ಆಕ್ಟ್ ಪ್ರಕಾರ ಕೇಂದ್ರಸರ್ಕಾರ ಅವಕಾಶ ಮಾಡಿಕೊಟ್ಟಿರಲಿಲ್ಲ. ರಾಜ್ಯ ಸರ್ಕಾರದ ಚೌಕಟ್ಟಿನಲ್ಲಿ ಅವಕಾಶ ಮಾಡಿಕೊಟ್ಟರು ಈಗ ಕೇಂದ್ರಸರ್ಕಾರದವರೇ ಎಲ್ಲಾ ಚುನಾವಣೆಗಳಲ್ಲಿ ೧೮ ವರ್ಷದವರಿಗೆ ಮತದಾನ ಮಾಡುವುದಕ್ಕೆ ಅಧಿಕಾರ ಕೊಟ್ಟಿರುವುದರಿಂದ ಏನೂ ತೊಂದರೆಯಾಗುವುದಿಲ್ಲ. ಹಿಂದೆ ರಾಜ್ಯ ಸರ್ಕಾರ ಮನಬಂದಂತೆ ೧೮ ವರ್ಷದವರಿಗೆ ಮತದಾನದ ಅಧಿಕಾರವನ್ನು ಕೊಟ್ಟಿದ್ದಾಗ ಕೇಂದ್ರಸರ್ಕಾರ ಪೀಪಲ್ಸ್ ರೆಪ್ರಸೆಂಟೇಟೀವ್ ಆಕ್ಟ್ ಪ್ರಕಾರ ಇದು ಸರಿಯಿಲ್ಲ ಎಂದು ಯಾರಾದರೂ ಕೋರ್ಟಿಗೆ ಹೋಗಬಹುದಾಗಿತ್ತು. ಆದರೆ ಈಗ ಕೇಂದ್ರಸರ್ಕಾರವೇ ಅವಕಾಶ ಮಾಡಿಕೊಟ್ಟಮೇಲೆ ಈ ಪ್ರಶ್ನೆ ಏಳುವುದಿಲ್ಲ ಎಂಬುದೂ ನನ್ನ ಅಭಿಪ್ರಾಯ. ದಯಮಾಡಿ ಲಾ ಡಿಪಾರ್ಟ್‌ಮೆಂಟಿನವರನ್ನು ಕೇಳಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ತಾವು ಹೇಳಿದ್ದು ಸರಿ. ೧೪ನೇ ಕಲಮಿಗೆ ಯಾವುದು ಸೇರಿರಲಿ ಸೇರದೇ ಇರಲಿ It is mandatory. That Shall be prepared and revised by the prescribed authority in the prescribed manner. ಮ್ಯಾಂಡೇಟರಿ ಇರುವುದರಿಂದ ಆ ಪ್ರೊಸೆಸ್ಸನ್ನು ಪುನ: ಮಾಡಬೇಕಾಗುತ್ತದೆ. ಮಾಡದೇ ಇದ್ದರೆ ಹೈಕೋರ್ಟಿನಲ್ಲಿ ಸ್ಟೈಕ್‌ಡೌನ್ ಮಾಡತಕ್ಕ ಸಾಧ್ಯತೆಗಳು ಹೆಚ್ಚಾಗಿರುದರಿಂದ ಡಿಲಿಟ್ ಮಾಡುವುದು ಒಳ್ಳೆಯದು ಎಂದು ನಿರ್ಣಯ ಮಾಡಿದ್ದೇವೆ.

ಇನ್ನೂ ಮೂಲಭೂತಪ್ರಶ್ನೆ ಹೆಚ್ಚಿನ ಸ್ವಾಯತ್ತತೆಯನ್ನು ನಗರಪಾಲಿಕೆಗಳ ಬಗ್ಗೆ ಕೊಡುವುದರ ಬಗ್ಗೆ ಇದನ್ನು ಮಾನ್ಯ ಸದಸ್ಯರು ಎತ್ತಿದ್ದಾರೆ. ಹೆಚ್ಚು ಅಧಿಕಾರ ವಿಕೇಂದ್ರೀಕರಣ ಮಾಡಿ ಈ ಸಂಸ್ಥೆಗಳಿಗೆ ಹೆಚ್ಚು ಅಧಿಕಾರ ಕೊಡಬೇಕೆಂದೂ ಏನು ಹೇಳಿದ್ದಾರೆ. ಅದು ಸಾಧುವಾದ ವಿಚಾರ ಆದರೆ ಅದಕ್ಕೆ ಸಮಗ್ರವಾದ ತಿದ್ದುಪಡಿಯನ್ನು ತರಬೇಕಾಗುತ್ತದೆ. ಲೋಕಸಭೆಯಲ್ಲಿ ನಗರಪಾಲಿಕೆ ಮಸೂದೆ ಮಂಜೂರು ಆದಮೇಲೆ ಅದು ರಾಜ್ಯಸಭೆಯಲ್ಲಿ ಬಿದ್ದು ಹೋಯಿತು. ಈಗ ಆ ಬಗ್ಗೆ ಕೇಂದ್ರದವರು ಏನು ಮಾಡುತ್ತಾರೆಂಬುದನ್ನು ನಾವು ಕಾದುನೋಡಬೇಕು. ಬಹುಶ: ಅವರು ಮಾಡಿದರೆ ನಮಗೆ ಹೆಚ್ಚು ಶಕ್ತಿ ಬರುತ್ತದೆ. ನಾವೂ ಕೂಡಾ ಅದಕ್ಕೆ ಅನುಗುಣವಾಗಿ ನಮ್ಮ ಜಿಲ್ಲಾಪರಿಷತ್ತು, ಮಂಡಲ ಪಂಚಾಯಿತಿ ಹಾಗೂ ಕಾರ್ಪೊರೇಷನ್ ಕಾಯ್ದೆಗಳನ್ನು ಬದಲಾವಣೆ ಮಾಡುವುದಕ್ಕೆ ಸಾಧ್ಯವಿದೆ. ಈಗ ನಾವು ಮಾಡಿ ಆ ನಂತರ ಪಾರ್ಲಿಮೆಂಟ್‌ನಲ್ಲಿ ಅಲ್ಲಿನ ಮಸೂದೆ ಪಾಸ್ ಆದಮೇಲೆ ಪುನ: ಇಲ್ಲೂ ಹೆಚ್ಚು ಕಡಿಮೆ ಮಾಡಬೇಕಾಗುತ್ತದೆ. ಆದರೆ ನಾನು ಒಂದು ವಿಚಾರವನ್ನು ಸಂಪೂರ್ಣವಾಗಿ ಒಪ್ಪುತ್ತೇನೆ ಜಿಲ್ಲಾಪರಿಷತ್ತಾಗಲೀ, ಕಾರ್ಪೊರೇಷನ್ ಆಗಲೀ, ಪುರಸಭೆಯಾಗಲೀ ಇಲ್ಲಿನ ಕಾಯ್ದೆಗೆ ಮೂಲಭೂತವಾದ ಬದಲಾವಣೆಗಳನ್ನು ತರುವುದಕ್ಕೆ ಸಮಗ್ರ ತಿದ್ದುಪಡಿಯನ್ನೂ ಮಾಡಬೇಕಾದ ಅವಶ್ಯಕತೆ ಇದೆ ಅದರ ಬಗ್ಗೆ ನನ್ನ ಭಿನ್ನಾಭಿಪ್ರಾಯ ಇಲ್ಲ. ಹೆಚ್ಚು ಶಕ್ತಿಯನ್ನು ಈ ಸಂಸ್ಥೆಗಳಿಗೆ ಕೊಡಬೇಕು. ತಮ್ಮ ಕಾಲಮೇಲೆ ಅವು ನಿಲ್ಲಿಬೇಕು. ಎಲ್ಲದಕ್ಕೂ ಅವು ಸರ್ಕಾರವನ್ನು ನಿರೀಕ್ಷೆ ಮಾಡಿಕೊಂಡು ಸರ್ಕಾರದ ಪೋಷಕ ಸಂಸ್ಥೆಗಳಾಗಿ ಉಳಿಯತಕ್ಕದ್ದನ್ನು ತತ್ವತಹಃ ಒಪ್ಪತಕ್ಕ ಮಾತಲ್ಲ. ಆದುದರಿಂದ ಈ ಬಗ್ಗೆ ತಾವು ಏನು ಸಲಹೆ ಕೊಟ್ಟಿದ್ದೀರಿ ಅದನ್ನು ಗಮನದಲ್ಲಿ ಇಟ್ಟುಕೊಂಡು ಮುಂದೆ ತರತಕ್ಕ ತಿದ್ದುಪಡಿಯಲ್ಲಿ ಅದನ್ನು ಅಳವಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಇನ್ನು ೨ ವಿಚಾರಗಳ ಬಗ್ಗೆ ಹೆಚ್ಚು ಪ್ರಸ್ತಾಪ

ಮಾಡಿದ್ದೀರಿ. ಕ್ಷೇತ್ರ ವಿಂಗಡಣೆ ಬಗ್ಗೆ ಹೇಳಿದ್ದೀರಿ. ಕ್ಷೇತ್ರ ವಿಂಗಡಣೆಯಲ್ಲಿ ಬೇರೆ ಬೇರೆ ಸಂದರ್ಭದಲ್ಲಿ ಒಂದು ರೀತಿಯ ಅನ್ಯಾಯವಾಗಿದೆ. ಹಿಂದುಳಿದ ವರ್ಗದವರು, ಅಲ್ಪಸಂಖ್ಯಾತರು, ಪರಿಶಿಷ್ಟ ಜಾತಿಯವರು, ಮಹಿಳೆಯರೇ ಸಾಕಷ್ಟು ಇರುವ ಕಡೆ ಕ್ಷೇತ್ರ ವಿಂಗಡಣೆಯಿಂದ ಇವರಿಗೆ ತೊಂದರೆಯಾಗಿದೆ ಈ ವಿಷಯದ ಬಗ್ಗೆ ಧ್ವನಿ ಈ ಚರ್ಚೆಯಲ್ಲಿ ಎದ್ದು ಕಾಣುತ್ತಿದೆ. ಕ್ಷೇತ್ರ ವಿಂಗಡಣೆಯನ್ನು ಆಮೂಲಾಗ್ರವಾಗಿ ಮಾಡುವುದಕ್ಕೆ ಹೋದರೆ ಆರೆಂಟು ತಿಂಗಳಾದರೂ ಕೂಡಾ ಚುನಾವಣೆ ನಡೆಸುವುದಕ್ಕೆ ಕಷ್ಟವಾಗುತ್ತದೆ. ಇವತ್ತು ಏನು ತಾರತಮ್ಯ ಆಗಿದೆ ಅದನ್ನು ಸರಿಪಡಿಸುವ ಸಲುವಾಗಿ ಅದನ್ನು ಭಾಗಶ: ಬದಲಾವಣೆ ಮಾಡತಕ್ಕದ್ದು ಇದೆ.

ಭಾಗಶ: ಕ್ಷೇತ್ರ ವಿಂಗಡಣೆಯನ್ನು ಪುನರ್ ವಿಂಗಡಣೆ ಮಾಡುವ ಬಗ್ಗೆ ಹೈಕೋರ್ಟಿ ಜಡ್ಜ್‌ಮೆಂಟ್ ಇದೆ. ಅದನ್ನು ಪರಿಶೀಲನೆ ಮಾಡಿ ತಮ್ಮ ಸಲಹೆಗಳನ್ನೂ ತೆಗೆದುಕೊಂಡು ಭಾಗಶ: ಪುನರ್ ವಿಂಗಡನೆ ಮಾಡುವುದಕ್ಕೆ ಬಹಶ: ಸಾಧ್ಯವಾಗುತ್ತದೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಕಳೆದ ಚುನಾವಣೆಯಲ್ಲಿ ಮತದಾರರ ಪಟ್ಟಿಯಿಂದ ಮತದಾನ ಮಾಡುವವರ ಹೆಸರು ಬಿಟ್ಟು ಹೋಗಿದೆ. ಅಲ್ಪಸಂಖ್ಯಾತರ ಪ್ರದೇಶದಲ್ಲಿ ಪರಿಶಿಷ್ಟ ಜಾತಿಯವರು ಯಾರು ಹೆಚ್ಚು ಇದ್ದಾರೆ ಅಲ್ಲಿ ಮತದಾರರ ಪಟ್ಟಿಯಿಂದ ಹೆಸರು ತಪ್ಪಿ ಹೋಗಿದೆ. ಈ ವಿಷಯ ಕೂಡಾ ಸರಕಾರದ ಗಮನಕ್ಕೆ ಬಂದಿದೆ. ಈ ಬಗ್ಗೆ ನಮ್ಮ ಇಲಾಖೆ ಮೂಲಕ ಮುಖ್ಯ ಚುನಾವಣಾ ಅಧಿಕಾರಿಗಳಿಗೆ ಬರೆದಂ ತಿಳಿಸಿದ್ದೇವೆ. ಇದನ್ನು ನಾವು ಯಾವ ರೀತಿ ಮಾಡಬೇಕಂ ಎಂಬುದನ್ನು ನೋಡಬೇಕು. ಜನಪ್ರತಿನಿಧಿ ಕಾಯ್ದೆ ಪ್ರಕಾರ ನಾವು ಮಾಡಬೇಕಾಗುತ್ತದೆ. ಜನಪ್ರತಿನಿಧಿ ಕಾಯ್ದೆ ಪ್ರಕಾರ ಸಪ್ಲಿಮೆಂಟರಿ ಲಿಸ್ಟ್‌ನಲ್ಲಿ ಎಲ್ಲಿ ಬಿಟ್ಟು ಹೋಗಿದೆ ಅದನ್ನು ಪುನ: ಸೇರಿಸತಕ್ಕ ಅವಕಾಶವನ್ನು ಯಾವ ರೀತಿ ಉಪಯೋಗ ಮಾಡುವುದಕ್ಕೆ ಸಾಧ್ಯ ಇದೆ ಅದರ ಹಿನ್ನಲೆಯಲ್ಲಿ ಖಂಡಿತವಾಗಿ ಈ ಬಗ್ಗೆ ಮುಖ್ಯ ಚುನಾವಣಾ ಅಧಿಕಾರಿಗಳವರಿಗೆ ನಮ್ಮ ಹೆಚ್. ಯು. ಡಿ ಇಲಾಖೆ ಮೂಲಕ ಬರೆದಿದ್ದೇವೆ. ಇನ್ನು ಹೆಣ್ಣುಮಕ್ಕಳಿಗೆ ಪ್ರಾತಿನಿಧ್ಯ ಈಗಾಗಲೇ ಇದೆ. ನಾವು ಜಿಲ್ಲಾಪರಿಷತ್ತಿನಲ್ಲಿ ಇಂಟೀರಿಯಂ ಮಂಡಲಗಳಿಗೆ ತಿದ್ದುಪಡಿ ಮಾಡುತ್ತಿದ್ದೇವೆ ಇಲ್ಲಿ ೩೦ ಪರ್ಸೆಂಟ್ ಅವಕಾಶ ಮಹಿಳೆಯರಿಗೆ ಇದೆ. ನಗರಪಾಲಿಕೆ ಕಾಯ್ದೆ ಪ್ರಕಾರ ಅಥವಾ ಪುರಸಭೆ ಕಾಯ್ದೆ ಪ್ರಕಾರ ಈ ಗಾಗಲೇ ೨೦ ಪರ್ಸೆಂಟ್ ಮಹಿಳೆಯರಿಗೆ ಪ್ರಾತಿನಿಧ್ಯ ಕೊಡಬೇಕೆಂದು ಈ ಗಾಗಲೇ ಕಾನೂನು ಇದೆ. ಖಂಡಿತಾ ಅದರಲ್ಲಿ ಸಿಗುತ್ತದೆ.

ಮುಂದೆ ಬರತಕ್ಕ ತಿದ್ದುಪಡಿಗಳಲ್ಲಿ ೨೦ ರಿಂದ ೩೦ ಖಂಡಿತವಾಗಿಯೂ ಮಾಡುವುದಕ್ಕೆ ಸಾಧ್ಯವಾಗಬಹುದು. ಈಗ ಮಾಡುವುದಕ್ಕೆ ಹೋದರೆ ಮತ್ತೂ ತೊಂದರೆಯಾಗುತ್ತದೆ. ಮಾನ್ಯ ಯಡಿಯೂರಪ್ಪನವರೂ ಅಥವಾ ಯಾರೇ ಹೇಳಿದರು. ಈಗ ೧೭೭ ಮಂದಿ ಕಾಂಗ್ರೆಸ್ ಸದಸ್ಯರು ಆರಿಸಿ ಬಂದಿದ್ದೀರಾ ತರಾತುರಿಯಿಂದ ಗೆದ್ದು ಬಂದಿದ್ದೇವೆನ್ನುವ ಅಹಂಕಾರದಿಂದ ಇದನ್ನು ಮಾಡುತ್ತಿದ್ದೀರಿ ಎಂದು ಹೇಳಿದರು. ಖಂಡಿತವಾಗಿಯೂ ಆ ರೀತಿ ಮಾಡಿಲ್ಲ, ಪ್ರಜಾಭ್ರಭುತ್ವದಲ್ಲಿ ಆಡಳಿತಾಧಿಕಾರಿಗಳಿಂದ ಸ್ಥಳೀಯ ಸಂಸ್ಥೆಗಳನ್ನು ನಡೆಸುವುದು ಸರಿಯಲ್ಲವೆಂದು ಜನರ ನಿರೀಕ್ಷೆಗಳಿಗೆ ಸ್ಪಂಧಿಸಿ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆಯನ್ನು ಮಾಡಲು ಪ್ರಯತ್ನ ಮಾಡಿದ್ದೇವೆ. ಬೇರೆ ನೆವ ಕೊಟ್ಟು ಚುನಾವಣೆಯನ್ನು ಮುಂದುವರಿಸಬಹುದು, ಸರ್ಕಾರಕ್ಕೆ ಆ ಅಧಿಕಾರವಿರದೆ ಆಡಳಿತಾಧಿಕಾರಿಗಳಿಂದ ಸ್ಥಳೀಯ ಸಂಸ್ಥೆಗಳ ಅಧಿಕಾರ ನಡೆಸುವುದು ಸರಿಯಲ್ಲ. ಆ ರೀತಿ ಮಾಡಲು ಖಂಡಿತವಾಗಿಯೂ ಸರ್ಕಾರಕ್ಕೆ ಇಚ್ಚೆಯಿಲ್ಲ, ಚುನಾವಣೆಯನ್ನು ಮುಂದೂಡುವುದಕ್ಕೆ ಅನೇಕ ಕಾರಣಗಳಿವೆ, ಕ್ಷೇತ್ರಗಳ ವಿಂಗಡಣೆ ಮಾಡಬೇಕಾಗಿದೆ ಹಾಗೆ ಹೀಗೆ ಎಂದು ಹೇಳಿ ೭-೮ ತಿಂಗಳಾದರೂ ಚುನಾವಣೆಯನ್ನು ಮುಂದೂಡುವುದಕ್ಕೆ ಸಾಧ್ಯವಿದೆ. ಆದರೂ ಕೂಡ ಆ ನೆವಕ್ಕೆ ನಾವು ಹೋಗದೆ ಚುನಾವಣೆಗಳನ್ನು ತಕ್ಷಣ ಮಾಡಬೇಕೆಂದು ಇದ್ದೇವೆ. ಚುನಾವಣೆಗಳಂ ಆಗಬೇಕಾಗಿರುವುದು ಸ್ಥಳೀಯ ಸಂಸ್ಥೆಗಳಿಗಿರಬಹುದು. ಮಂಡಲಗಳಿರಬಹುದು, ಅಥವಾ ಪುರಸಭೆಗಳಿರಬಹುದು ನಗರಪಾಲಿಕೆಗಳು ಇರಬಹುದು ಅಂತಹ ಸಂಸ್ಥೆಗಳು ಜನ ಪ್ರತಿನಿಧಿಗಳಿಂದ ನಡೆಯಬೇಕು. ಅವರಿಗೆ ಹೆಚ್ಚು ಶಕ್ತಿಯನ್ನು ಕೊಡಬೇಕೆನ್ನುವ ಉದ್ದೇಶದಿಂದ ಈ ತಿದ್ದುಪಡಿಯನ್ನು ತಂದಿದ್ದೇವೆ. ಅಹಂಕಾರದಿಂದ ಈ ಚುನಾವಣೆಯಲ್ಲಿ ನಾವು ಗೆದ್ದೇ ಗೆಲ್ಲುತ್ತೇವೆಂದು ಮಾಡುತ್ತಿಲ್ಲ. ಚುನಾವಣೆಯಲ್ಲಿ ನೀವು ಗೆಲ್ಲಬಹುದಂ ನಾವು ಗೆಲ್ಲಬಹುದು ಅಹಂಕಾರದಿಂದ ಈ ಚುನಾವಣೆಯನ್ನು ಘೋಷಣೆ ಮಾಡುತ್ತಿದ್ದೇವೆಂದು ಖಂಡಿತವಾಗಿಯೂ ಆ ಭಾವನೆ ಮಾನ್ಯ ಸದಸ್ಯರಲ್ಲಿ ಬರಬಾರದೆಂದು ನಾನು ಹೇಳುತ್ತಿದ್ದೇನೆ. ಮಾನ್ಯ ವಾಟಾಳ್‌ನಾಗರಾಜ್‌ರವರು ಮೂಲಭೂತವಾದ ಪ್ರಶ್ನೆಗಳನ್ನು ಎತ್ತಿದ್ದಾರೆ. ಎಂ. ಇ. ಎಸ್. ಸದಸ್ಯರುಗಳು ಎತ್ತಿದ್ದಾರೆ. ಬೆಳಗಾಂ ನಗರಪಾಲಿಕೆಯ ಮೇಲೆ ಯಾವ ಧ್ವಜವನ್ನು ಎಂದಿನಿಂದ ಹಾಕಿದ್ದಾರೆನ್ನುವ ಸ್ಪಷ್ಟವಾದ ಮಾಹಿತಿಯಿಲ್ಲ. ಒಂದನ್ನು ಒಪ್ಪುತ್ತೇನೆ. ಸಾರ್ವಜನಿಕ ಸಂಸ್ಥೆಗಳಂ ಇರುವ ಕಡೆ ಯಾವುದೇ ರೀತಿಯಲ್ಲಿ ಅದು ಯಾವುದೇ ಚಿಹ್ನೆ ಇರಬಹುದು ಯಾವುದೇ ಧ್ವಜವಿರಬಹುದು ಅದನ್ನು ಹಾಕಲಿಕ್ಕೆ ಫ್ಲಾಗ್ ರೂಲ್ಸ್ ಎಂದು ಇದೆ, ನಾವು ಅದನ್ನು ಚಿಂತನೆ ಮಾಡಬೇಕಾಗುತ್ತದೆ.

ಶ್ರೀ ವಾಟಾಳ್‌ನಾಗರಾಜ್.—ಮಾನ್ಯ ಮಂತ್ರಿಗಳು ಒಂದು ನಿಮಿಷ ಯೀಲ್ಡ್ ಆಗಂವುದಾದರೆ, ಮಂತ್ರಿಗಳು ಮಾತನಾಡುವಾಗ ಅಲ್ಲಿರತಕ್ಕ ಧ್ವಜದ ಬಗ್ಗೆ ನನ್ನ ಗಮನಕ್ಕೆ ಬಂದಿಲ್ಲವೆಂದು ತಾವು ಆರು ವರ್ಷಗಳಿಗಿಂತ ಹಿಂದೆ ಮಂತ್ರಿಗಳಾಗಿದ್ದವರು. ಆಗಲು ಸಹ ಆ ಬಾವುಟ ಇತ್ತು. ಬೆಳಗಾವಿ ನಗರಸಭೆಯ ರಾಷ್ಟ್ರಧ್ವಜವನ್ನು ಅಣಕಿಸತಕ್ಕ ಮರಾಠಿ ಧ್ವಜ ಇರುವುದು ನನ್ನ ಗಮನಕ್ಕೆ ಬಂದಿಲ್ಲ ವೆಂದು ಹೇಳುತ್ತಿದ್ದಾರೆ. ಅದನ್ನು ನಾನು ತಮ್ಮ ಗಮನಕ್ಕೆ ತಂದಿದ್ದೇನೆ. ಆದ್ದರಿಂದ ನಿಯಮಗಳ ಪ್ರಕಾರ ನಾವು ಹಾಗೆ ಮಾಡುತ್ತೇವೆ ಹೀಗೆ ಮಾಡುತ್ತೇವೆಂದು ತಿಪ್ಪೆ ಸಾರಿಸತಕ್ಕದ್ದು ಬೇಡ. ದಯವಾಡಿ ಕೇಳಿ, ಅಲ್ಲಿ ಧ್ವಜ ಇದೆ, ಬೇಕಾದರೆ ನಿಮ್ಮ ಅಧಿಕಾರಿಗಳನ್ನು ಕೇಳಿ, ಈ ಕ್ಷಣದಲ್ಲಿಯೇ ಆ ಧ್ವಜವನ್ನು ಕೆಳಗೆ ಇಳಿಸುತ್ತೇವೆ ಎನ್ನುವ ಆಶ್ವಾಸನೆಯನ್ನು ಕೊಡಿ.

SRI B. I. PATIL.—What Sri Vatal Nrgaraj telling is not correct. There is a National Flag. Below that there is Shivaji flag.

ಶ್ರೀ ವಾಟಳ್ ನಾಗರಾಜ್.—ರಾಷ್ಟ್ರಧ್ವಜವನ್ನು ಅಣಕಿಸತಕ್ಕ ರೀತಿಯಲ್ಲಿ ಮೊದಲಿನಿಂದಲೂ ಅಲ್ಲಿ ಮರಾಠಿ ಧ್ವಜ ಇದೆ. ಆ ಧ್ವಜ ಮಾಜಿಯವರ ಆಸ್ತಿ ಇರಬಹುದು. ನಗರಸಭೆ ಹತ್ತಿರ ರಾಷ್ಟ್ರಧ್ವಜ ಒಂದೇ ಇರಲಿ. ಅಲ್ಲಿದ್ದರೆ ಏಕಪ್ರಕಾರವಾಗಿ ನಗರಪಾಲಿಕೆಗಳಿಗೆ ಬೇರೆ ಬೇರೆ ಧ್ವಜಗಳನ್ನು ಇಡುವಂತೆ ಮಾಡಿ. ಆ ರೀತಿ ಮಾಡುವುದಾದರೆ. ಎಲ್ಲಾ ನಗರಪಾಲಿಕೆಗಳ ಧ್ವಜಗಳು, ಊರು ಊರಿನ ಧ್ವಜಗಳು, ಜಾತಿ ಜಾತಿಯ ಧ್ವಜಗಳು, ಧರ್ಮ ಧರ್ಮಗಳ ಧ್ವಜಗಳು ಬರಬೇಕಾಗುತ್ತದೆ.

MR. SPEAKER.—Is it a Corporation ?

SRI B.I. PATIL.—Yes.

MR. SPEAKER.—Does it have a separate flag like Bangalore City Corporation ?

SRI B. I. PATIL.—National flag is there. That is also Shivaji flag below the National flag. National flag is there on top. Even in Bangalore City Corporation two flags have been hoisted, one is National flag and another is individual flag of the Corportion.

ಶ್ರೀ ವಾಟಾಳ್ ನಾಗರಾಜ್.—ಬೆಳಗಾಂ ನಗರಪಾಲಿಕೆಯಲ್ಲಿ ರಾಷ್ಟ್ರಧ್ವಜ ಕೆಳಗೆ ಇದೆ. ಅದರ ಕೆಳಗೆ ಶಿವಸೇನೆಯ ಧ್ವಜವಿದೆ. ಅದು ಈ ರಾಷ್ಟ್ರಕ್ಕೆ ಆಗಿರುವ ಆಗೌರವ. ಆಗೌರವ. ಈ ನಾಡಿಗೆ ಆಗಿರುವ ಆಗೌರವ. ಸುಮಾರು ೨೦ ವರ್ಷಗಳಿಂದ ಆ ಧ್ವಜವಿದೆ. ತಾವು ರಾಜ್ಯಭಾರ ಮಾಡುತ್ತಿದ್ದ ಕಾಲದಿಂದಲೂ ಆ ಧ್ವಜವಿದೆ. ಅದನ್ನು ನಾನು ಎಲ್ಲರ ಗಮನಕ್ಕೆ ತಂದಿದ್ದೇನೆ. ಯಾರ ಗಮನಕ್ಕೆ ಬಂದಿಲ್ಲ ಈಗ ತಾವು ಅದನ್ನು ತೆಗೆಯಿಸಲು ಯೋಚನೆ ಮಾಡಬೇಕಾಗಿದೆ.

(ಮುಂದಲ)

ಶ್ರೀ ವಾಟಾಳ್ ನಾಗರಾಜ್.—ಮತ್ತೊಂದು ಪ್ರಸಂಗವನ್ನು ಹೇಳುತ್ತೇನೆ: ಬೆಳಗಾವಿಯ ನಗರಪಾಲಿಕೆಯ ಸಭೆಯಲ್ಲಿ ಬೆಳಗಾವಿ ಮಹಾರಾಷ್ಟ್ರಕ್ಕೆ ಹೋಗಬೇಕು ಎನ್ನುವ ನಿರ್ಣಯವನ್ನು ಮಾಡಿದರು. ಎಷ್ಟು ನಾಚಿಕೆಗೇಡಿತನದ ವಿಷಯ ಇದು ಬೆಳಗಾವಿಯ ನಗರಸಭೆಯವರು ಬೆಳಗಾವಿ ಮಹಾರಾಷ್ಟ್ರಕ್ಕೆ ಹೋಗಬೇಕು ಎನ್ನತಕ್ಕಂಥ ನಿರ್ಣಯ ಮಾಡಿದಾಗ ಸರ್ಕಾರ ಸುಮ್ಮನೆ ಕುಳಿತಿತ್ತು, ಆ ನಗರಸಭೆಯನ್ನು ವಜಾ ಮಾಡಬೇಕಾಗಿತ್ತು. ಸರ್ಕಾರದ ವಿರುದ್ಧವಾಗಿ. ನಾಡಿನ ವಿರುದ್ಧವಾಗಿ ಇಂತಹ ನಿರ್ಣಯ ಮಾಡಿದಾಗ ಸರ್ಕಾರ ಕ್ರಮ ತೆಗೆದುಕೊಳ್ಳಬೇಕಾಗಿತ್ತು. ಇಂತಹ ಧ್ವಜವನ್ನು ಹಾಕತಕ್ಕಂಥಾದ್ದು ನಿಜಕ್ಕೂ ಶೋಚನೀಯವಾದ ವಿಷಯವೆಂದು ನಾನು ತಮ್ಮ ಮೂಲಕ ಸರ್ಕಾರಕ್ಕೆ ತಿಳಿಸುತ್ತಿದ್ದೇನೆ.

(ಮುಂದಲ)

ಅಧ್ಯಕ್ಷರು.—ನಾನು ನೀವು ಹೇಳಿದ್ದನ್ನು ಕೇಳಿದ್ದೇನೆ.

ಶ್ರೀ ಎಸ್. ಎಚ್. ಕೌಜಲಗಿ.—ಅದನ್ನು ತೆಗೆಸಲಿಕ್ಕೆ ಸರ್ಕಾರದ ಆರ್ಡರ್ ಸಹ ಆಯಿತು. ಆರ್ಡರ್ ಆದರೂ ಸಹಿತ ಇವತ್ತಿನ ತನಕ ಆ ಧ್ವಜವನ್ನು ತೆಗೆಯಿಸಿಲ್ಲ.

ಅಧ್ಯಕ್ಷರು.—ಆರ್ಡರ್ ಯಾವಾಗ ಆಯಿತು? ಎಷ್ಟನೇ ಇಸವಿಯಲ್ಲಿ ಆಯಿತು?

ಶ್ರೀ ಎಸ್. ಎಚ್. ಕೌಜಲಗಿ—ಶ್ರೀ ದೇವರಾಜ ಅರಸು ಅವರು ಮುಖ್ಯಮಂತ್ರಿಗಳಾಗಿದ್ದಾಗ ಅದನ್ನು ತೆಗೆಸಬೇಕೆಂದು ಆರ್ಡರ್ ಆಯಿತು.

MR. SPEAKER.—Any way some policy will have to be formulated about these things.

ಶ್ರೀ ಎಸ್. ಎಚ್. ಕೌಜಲಗಿ.—ಬೆಳಗಾವಿಯ ಬಗ್ಗೆ ಏನಾದರೂ ಸಮಸ್ಯೆ ಪ್ರಾರಂಭವಾಗಿದ್ದರೆ ಅದು ಶ್ರೀ ದೇವರಾಜು ಅರಸು ಅವರ ಕಾಲದಲ್ಲಿ ಆಯಿತು.

ಶ್ರೀ ಎಂ. ವೀರಪ್ಪ ಮೊಯಿಲಿ.—ಶ್ರೀ ವಾಟಾಳ್ ನಾಗರಾಜ್ ಅವರು ಈಗ ಉತ್ತರ ಕೊಡಬೇಕೆಂದು ಹೇಳಿದ್ದಾರೆ. ನಾವು ಉತ್ತರ ಕೊಡಬೇಕಾಗುತ್ತದೆ ಜವಾಬ್ದಾರಿಯಿಂದ ನೀವು ಪ್ರಶ್ನೆ ಕೇಳಿದಾಗ ಅಷ್ಟೇ ಜವಾಬ್ದಾರಿಯಿಂದ ನಾವು ಉತ್ತರ ಕೊಡುತ್ತೇವೆ. ಇಲ್ಲಿ ಪ್ರಶ್ನೆ ಏನೆಂದರೆ, ಈ ಜಿಲ್ಲಾ ಪರಿಷತ್ತುಗಳಲ್ಲಿ ಅವರದ್ದೇ ಆದ ಧ್ವಜವನ್ನು ಉಪಯೋಗ ಮಾಡುತ್ತಾರೆ.

ಶ್ರೀ ಎಂ. ಪಿ. ವೆಂಕಟೇಶ್.—ಮೈಸೂರು ಜಿಲ್ಲೆಯಲ್ಲಿ ಇಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.—ರಾಷ್ಟ್ರಧ್ವಜವನ್ನು ಹಾಕಬೇಕಾದದ್ದು ನಿಯಮ. ಸರ್ಕಾರಿ ಕಟ್ಟಡಗಳ ಮೇಲೆ ಅದನ್ನು ಹಾಕಬೇಕು. ನಿಜ ಮಹಾನಗರಪಾಲಿಕೆ ಪುರಸಭೆಗಳ ಮೇಲೆ ಅವರ ಧ್ವಜ ಇರುತ್ತದೆ. ಬೆಂಗಳೂರಿನಲ್ಲಿ ಬೆಂಗಳೂರು ನಗರಪಾಲಿಕೆಯ ಕಟ್ಟಡದ ಮೇಲೆ ರಾಷ್ಟ್ರಧ್ವಜ ಇದೆ. ಮತ್ತು ನಗರಪಾಲಿಕೆಯ ಧ್ವಜ ಇದೆ. ಇದು ಪರಸ್ಪರ ಸಂಬಂಧ ಇರುವಂಥಾದ್ದು. ಆದರೆ ಇಲ್ಲಿ ಬೆಳಗಾವಿ ನಗರಸಭೆಯಲ್ಲಿ ಹಾಗಿಲ್ಲ. ಈಗ ಮಾನ್ಯ ಮಂತ್ರಿಗಳು ಹೇಳಿದರು ಜಿಲ್ಲಾ ಪರಿಷತ್ತುಗಳಿಗೆ ಅವರದ್ದೇ ಆದ ಧ್ವಜ ಇದೆ ಎಂದು. ಜಿಲ್ಲಾ ಪರಿಷತ್ತುಗಳಿಗೆ ಅವರದ್ದೇ ಆದ ಧ್ವಜ ಇರಬಹುದು. ಆದರೆ ಬೆಳಗಾವಿ ನಗರಪಾಲಿಕೆಯ ಮೇಲಿರುವುದು ಮಹಾರಾಷ್ಟ್ರ ಏಕೀಕರಣ ಸಮಿತಿಯ ಧ್ವಜ. ಅದೇನೂ ಅವರ ಪಕ್ಷದ ಕಚೇರಿ ಅಲ್ಲ. ಅದು ಇವತ್ತಿನದಲ್ಲ. ಸುಮಾರು ೨೫ ವರ್ಷಗಳಿಂದಲೂ ಇದೆ. ಪ್ರಶ್ನೆ ಬಂದಾಗಲೆಲ್ಲ ನಾವು ನಿಮ್ಮ ಗಮನಕ್ಕೆ ತರುತ್ತಲೇ ಇದ್ದೇವೆ. ಈಗ ನಿಮ್ಮ ಗಮನಕ್ಕೆ ತಂದಿದ್ದೇನೆ. ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂದು ಸ್ಪಷ್ಟವಾಗಿ ಹೇಳಿ?

ಅಧ್ಯಕ್ಷರು.—ರಾಜಮಹಾರಾಜರುಗಳ ಧ್ವಜಗಳನ್ನು ತೆಗೆದುಹಾಕಿದ್ದರಿಂದ ಧ್ವಜಗಳ ಸಂಖ್ಯೆ ಕಡಿಮೆಯಾಯಿತು ಈ ಕಾಲದಲ್ಲಿ ಅದು ಮಾತ್ರ ಮುಂದುವರೆದಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ತಾವು ಅಪ್ಪಣೆ ಕೊಡಿಸಿದ್ದೀರಿ. ಇದೇನೂ ಇವತ್ತಿನ ಪ್ರಶ್ನೆ ಅಲ್ಲ. ಕಳೆದ ೧೮ ವರ್ಷಗಳಿಂದಲೂ ಇದೆಯೆಂದು ಹೇಳಿದ್ದಾರೆ. ಈಗ ನಾವು ನಿಯಮಪ್ರಕಾರ ನಡೆಯಬೇಕಾಗುತ್ತದೆ. ಸನ್ಮಾನ್ಯ ಕೌಜಲಗಿಯವರು ಇದರ ಬಗ್ಗೆ ದೇವರಾಜ ಅರಸು ಅವರು ಇರುವಾಗ ಆದೇಶವನ್ನು ಹೊಡಿಸಿದ್ದರು ಎಂದು ತಿಳಿಸಿದರು. ನಾವು ಇದನ್ನೆಲ್ಲಾ ತರಿಸಿ ನಿಯಮ ಪ್ರಕಾರ ನಡೆದುಕೊಳ್ಳಬೇಕಾಗುತ್ತದೆ. ಏಕೆಂದರೆ ಮಾನ್ಯ ಸದಸ್ಯರು ಈಗ ಈ ಪ್ರಶ್ನೆಯನ್ನು ಎತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು.—ಯಾರಾದರೊಬ್ಬರು ಮಾತನಾಡಿ. ಮಂತ್ರಿಗಳು ಹೇಳಿಕೆ ಮುಗಿಸಿದ ಮೇಲೆ ಸ್ಪಷ್ಟೀಕರಣ ಕೇಳಿ.

೧೦–೪೫ ಎ.ಎಂ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.—ಇದು ಪಕ್ಷದ ಪ್ರಶ್ನೆ ಅಲ್ಲ, ಕಾಂಗ್ರೆಸ್, ಜನತಾ ಎನ್ನುವಂಥ ಪ್ರಶ್ನೆ ಅಲ್ಲ. ಇಡೀ ಕನ್ನಡ ನಾಡಿನ ಜನತೆಯ ಪ್ರಶ್ನೆ, ಕನ್ನಡಿಗರ ಪ್ರಶ್ನೆ ಮತ್ತು ರಾಷ್ಟ್ರದ ಪ್ರಶ್ನೆ. ರಾಷ್ಟ್ರಧ್ವಜದ ಪಕ್ಕದಲ್ಲಿ ಯಾವುದೋ ಒಂದು ಪಕ್ಷದ ಧ್ವಜವನ್ನು ಹಾಕಿಕೊಂಡರೆ, ಅದು ರಾಷ್ಟ್ರಕ್ಕೆ ಅಗೌರವ, ರಾಜ್ಯಕ್ಕೆ ಅಗೌರವ. ಇದು ಅಲ್ಲಿ ೧೮ ವರ್ಷದಿಂದ ಇದೆ, ಇದರ ಬಗ್ಗೆ ಇನ್ನು ಮುಂದೆ ನೋಡುತ್ತೇವೆ, ಎಂದೂ, ಇದನ್ನು ೨೫ ವರ್ಷಗಳವರೆಗೆ ಬಿಡುವುದಕ್ಕೆ ಅವಕಾಶ ಕೊಡುವುದಿಲ್ಲ. ಇವತ್ತು ತಾವು ಅಧಿಕಾರಕ್ಕೆ ಬಂದಿದ್ದೀರಿ, ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂಬುದನ್ನು ಇಲ್ಲಿ ಹೇಳಿ?

ಶ್ರೀ ಎಂ. ವೀರಪ್ಪ ಮೊಯಿಲಿ.—ಇದರಲ್ಲಿ ಎರಡು ಭಾಗ ಇದೆ. ಸನ್ಮಾನ್ಯ ಸದಸ್ಯರು ಹೇಳಿದ ಪ್ರಕಾರ, ಆ ಬಾವುಟ ಅಲ್ಲಿ ೧೮ ವರ್ಷದಿಂದ ಇದೆ. ನಿನ್ನೆ ಮೊನ್ನೆ ಹಾಕಿದ್ದರೆ ಇಲ್ಲಿಯೇ ಅದನ್ನು ತೆಗೆಯಿರಿ ಎಂದು ಹೇಳಬಹುದಿತ್ತು. ೧೮ ವರ್ಷದಿಂದ ಇದೆ ಎಂದು ಹೇಳಿರುವುದರಿಂದ ನನ್ನ ಸ್ವಂತ ವಿಚಾರ ಅಲ್ಲ, ಅದನ್ನು ತಾವೇ ಹೇಳಿದ್ದೀರಿ. ಈ ರೀತಿ ಅವರು ಧ್ವಜ ಹಾಕಿರುವುದು ಸಮಂಜಸವೇ, ಸರಿಯೇ ಎಂಬುದನ್ನು ವಿಚಾರ ಮಾಡಬೇಕಾಗುತ್ತದೆ. ಈಗಿರತಕ್ಕ ನಿಯಮದ ಪ್ರಕಾರ ನಾನು ಪ್ರಾರಂಭದಲ್ಲಿಯೇ ಹೇಳಿದ್ದೇನೆ. ಆದರೆ ವಾಟಾಳ್ ನಾಗರಾಜ್ ಅವರು ಇದನ್ನು ಕೇಳಿಕೊಳ್ಳಲಿಲ್ಲ.

ಶ್ರೀ ವಾಟಾಳ್ ನಾಗರಾಜ್.—ಇವರು ನನ್ನನ್ನು ಕಿವಿ, ಮೂಗು, ಗಂಟಲು ಡಾಕ್ಟರ್ ಹತ್ತಿರ ಕಳುಹಿಸುತ್ತಿದ್ದಾರೆ. ನನಗೆ ಕಿವಿ ಚೆನ್ನಾಗಿದೆ, ಜೊತೆಗೆ ತಾವು ಕನ್ನಡದಲ್ಲಿ ಮಾತನಾಡುತ್ತಿದ್ದೀರಿ, ನನಗೆ ಚೆನ್ನಾಗಿ ಅರ್ಥವಾಗುತ್ತಿದೆ.

ಅಧ್ಯಕ್ಷರು.—ಮಾನ್ಯ ವಾಟಾಳ್ ನಾಗರಾಜ್ ಅವರಿಗೆ ಕಿವಿಯೂ ಚೆನ್ನಾಗಿದೆ, ಗಂಟಲೂ ಚೆನ್ನಾಗಿದೆ. ಆದ್ದರಿಂದ ಅವರು ಯಾವ ಡಾಕ್ಟರ ಹತ್ತಿರವೂ ಹೋಗಬೇಕಾಗಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ಸನ್ಮಾನ್ಯ ಅಧ್ಯಕ್ಷರೇ, ನಮ್ಮ ಸ್ನೇಹಿತರಾದ ವಾಟಾಳ್ ನಾಗರಾಜ್ ಅವರಿಗೆ ಇರತಕ್ಕ ಕನ್ನಡದ ಅಭಿಮಾನ ನನಗೆ ಗೊತ್ತಿದೆ. ಇಲ್ಲಿ ಪ್ರಶ್ನೆ ಏನೆಂದರೆ, ಈಗಿನ ನಿಯಮದ ಪ್ರಕಾರ ಒಂದು ವೇಳೆ ಕೆಲವು ಸಾರ್ವಜನಿಕ ಸಂಸ್ಥೆಗಳ ಮೇಲೆ ಯಾವ ರೀತಿಯ ಧ್ವಜಗಳು ಇರಬೇಕು, ಯಾವ ರೀತಿಯಲ್ಲಿ ಗೌರವ ತೋರಿಸಬೇಕು ಇದರ ಬಗ್ಗೆ ಈಗಿನ ಕಾನೂನುಗಳಲ್ಲಿ ಯಾವ ರೀತಿಯ ಅಡೆತಡೆ ಮಾಡುವುದಕ್ಕೆ ಅವಕಾಶ ಇಲ್ಲದಿದ್ದರೆ, ಇದನ್ನು ನೋಡಬೇಕಾಗುತ್ತದೆ. ಇದು ಬರೀ ಬೆಳಗಾಂ ಕಾರ್ಪೊರೇಷನ್‌ಗೆ ಮಾತ್ರ ಅನ್ವಯವಾಗುವುದಿಲ್ಲ. ಇಡೀ ಕರ್ನಾಟಕ ರಾಜ್ಯಕ್ಕೇ ಅನ್ವಯವಾಗುತ್ತದೆ. ಅದೂ ಅಲ್ಲಿ ಚುನಾಯಿತ ಪ್ರತಿನಿಧಿಗಳಿರುತ್ತಾರೆ. ಏಕೆಂದರೆ, ಕಾರ್ಪೊರೇಷನ್ ಇರಬಹುದು, ಜಿಲ್ಲಾ ಪರಿಷತ್ ಇರಬಹುದು, ಮುನಿಸಿಪಾಲಿಟಿಗಳು ಇರಬಹುದು. ಇಷ್ಟರವರೆಗೆ ಹಿಂದಿನ ಸರ್ಕಾರ ಆಲೋಚನೆ ಮಾಡಿರಲಿಲ್ಲ, ರಾಷ್ಟ್ರೀಯ ಧ್ವಜಗಳನ್ನು ಯಾವ ರೀತಿಯಿಂದ ಉಪಯೋಗ ಮಾಡಬೇಕು, ಬೇರೆ ಬೇರೆ ಧ್ವಜಗಳನ್ನು ಉಪಯೋಗ ಮಾಡಬಹುದೇ, ಬೇಡವೇ ಎಂಬುದರ ಬಗ್ಗೆ ಈಗ ಇರತಕ್ಕ ಕಾನೂನಿನಲ್ಲಿ ನಿಲ್ಲಿಸತಕ್ಕ ಕಾರ್ಯಕ್ರಮ ಆಗದೇ ಹೋದರೆ, ಒಂದು ಕಾಮನ್ ಯೂನಿಫಾರಂ ಕೋಡ್ ಆಫ್ ಕಾಂಡಕ್ಟ್ ರೂಲ್ಸ್ ಮುಖೇನ ಹೊಸದಾಗಿ ಈ ವಿಚಾರವನ್ನು ಮಾಡಬೇಕಾಗುತ್ತದೆ. ಈ ವಿಚಾರವನ್ನು ಖಂಡಿತವಾಗಿಯೂ ಆಲೋಚನೆ ಮಾಡುತ್ತೇವೆಂದು ಹೇಳುವುದಕ್ಕೆ ನಾನು ಹೊರಟೆ, ಇದನ್ನು ಮಾಡೋಣ, ತಾವು ಹೇಳತಕ್ಕಂಥ ವಿಚಾರ ಪೂರ್ತಿಯಾಗಿ ಅರ್ಥವಾಗಿದೆ. ನನಗೆ ತಿಳಿದ ಪ್ರಕಾರ ಈಗಿನ ನಿಯಮಗಳಲ್ಲಿ ಇದನ್ನು ತಡೆಯತಕ್ಕ ಅಧಿಕಾರ ಇಲ್ಲದೇ ಇದ್ದರೆ, ಇಂತಹ ಸಾರ್ವಜನಿಕ ಸಂಸ್ಥೆಗಳು, ಸರ್ಕಾರಿ ಸಂಸ್ಥೆಗಳು ಯಾವ ಧ್ವಜ ಹಾಕಬೇಕು, ಯಾವ ರೀತಿಯಲ್ಲಿ ಇರಬೇಕು. ಯಾವ ರೀತಿಯಲ್ಲಿ ಗೌರವ ಸೂಚಿಸಬೇಕು. ರೂಲ್ಸ್ ಪ್ರಕಾರ ಮುನಿಸಿಪಲ್ ಆಕ್ಟ್ ಪ್ರಕಾರ, ಜಿಲ್ಲಾಪರಿಷತ್ ಆಕ್ಟ್ ಪ್ರಕಾರ, ಕಾಮನ್ ಆಕ್ಟ್ ಮಾಡಿ, ಕ್ರಮ ಕೈಗೊಂಡರೆ ಎಲ್ಲರೂ ಒಪ್ಪುತ್ತಾರೆ. ಏಕೆಂದರೆ ರಾಷ್ಟ್ರಧ್ವಜಕ್ಕೆ ಗೌರವ ತೋರಿಸಬೇಕು, ಅದರಲ್ಲಿ ಅನುಮಾನ ಇಲ್ಲ, ಸಂಪೂರ್ಣವಾಗಿ ಗೌರವ ತೋರಿಸಬೇಕು. ಗಂಭೀರವಾದಂಥ ಪ್ರಶ್ನೆಯನ್ನು ಸನ್ಮಾನ್ಯ ಸದಸ್ಯರು ಎತ್ತಿದ್ದಾರೆ, ಇದರ ಬಗ್ಗೆ ಈಗಿನ ನಿಯಮಾವಳಿಯಲ್ಲಿ ಅವಕಾಶ ಇಲ್ಲದಿದ್ದರೆ ಯಾವರೀತಿಯಲ್ಲಿ ಯೂನಿಫಾರಂ ಕೋಡ್ ಆಫ್ ಕಾಂಡಕ್ಟ್ ನಿಯಮಗಳನ್ನು ಸಿದ್ಧಪಡಿಸಿ ಯಾವ ರೀತಿಯ ಸಂಸ್ಥೆಗಳು, ಯಾವ ರೀತಿಯ ಗೌರವ ತೋರಿಸಬೇಕು ಎಂಬ ಬಗ್ಗೆ ಖಂಡಿತವಾಗಿಯೂ ನಿಯಮಗಳನ್ನು ಮಾಡುವುದಕ್ಕೆ ಆಲೋಚನೆ ಮಾಡುತ್ತೇವೆ,

ಶ್ರೀ ಪಿ.ಜಿ.ಆರ್. ಸಿಂಧ್ಯ.—ಅಧ್ಯಕ್ಷರೆ, ಮಾನ್ಯ ಮಂತ್ರಿಯವರು ಚುನಾವಣೆಗಳನ್ನು ತಕ್ಷಣ ನಡೆಸಬೇಕೆಂದು ಹೇಳಿ, ಅವರ ಪಕ್ಷದಿಂದ ವತ್ತು ಸರ್ಕಾರದಿಂದ ತೀರ್ಮಾನ ಮಾಡಿರುವುದನ್ನು ಈ ಕಡೆ ಕುಳಿತಿರುವ ಎಲ್ಲಾ ಸದಸ್ಯರೂ ಸ್ವಾಗತ ಮಾಡಿದ್ದಾರೆ. ಮಾನ್ಯ ಮಂತ್ರಿಗಳು ಕೆಲವು ಹೆಸರುಗಳು ಬಿಟ್ಟು ಹೋಗಿವೆ, ಇದನ್ನು ಸೇರಿಸುವುದಕ್ಕೋಸ್ಕರ ಚೀಫ್ ಎಲೆಕ್ಟೋರಲ್ ಆಫೀಸರಿಗೆ ಬರೆದಿದ್ದೇವೆ, ಇದರ ಬಗ್ಗೆ ಪ್ರಾಮಾಣಿಕ ಪ್ರಯತ್ನ ಮಾಡುತ್ತೇವೆಂದು ಹೇಳಿದ್ದಾರೆ, ಅದನ್ನೂ ಸ್ವಾಗತ ಮಾಡುತ್ತೇವೆ. ಅವರು ಹೇಳಿರತಕ್ಕಂಥ ಒಂದು ವಿಚಾರದ ಬಗ್ಗೆ ವತ್ತು ಇದರ ಸೂಕ್ಷ್ಮತೆಯ ಅರಿವು ಏನಿದೆ ಎಂಬುದನ್ನು ಈ ಸಂದರ್ಭದಲ್ಲಿ ಸ್ಪಷ್ಟ ಮಾಡುವುದಕ್ಕೆ ಬಯಸುತ್ತೇನೆ. ಈ ಮುನಿಸಿಪಾಲಿಟಿಗಳಲ್ಲಿ ವಾರ್ಡ್‌ಗಳನ್ನು ಮರು ವಿಂಗಡಣೆ ಮಾಡತಕ್ಕ ವಿಚಾರದಲ್ಲಿ ತಾವು ಭಾಗಶಃ ಮಾಡುವುದಕ್ಕಾಗುತ್ತದೆ, ಪೂರ್ತಿಯಾಗಿ ಮಾಡುವುದಕ್ಕೆ ೭–೮ ತಿಂಗಳು ಚುನಾವಣೆ ತಡವಾಗುತ್ತದೆ ಎಂದು ಹೇಳಿದ್ದೀರಿ. ನಮಗೂ ಖಂಡಿತವಾಗಿ ಇದು ಬೇಕು. ಯಾರು ಗೆಲ್ಲುತ್ತಾರೆ ಅದು ಮತದಾರರಿಗೆ ಸಂಬಂಧಪಟ್ಟ ವಿಚಾರ. ನಮಗೂ ಚುನಾವಣೆಗಳನ್ನು ತಕ್ಷಣ ನಡೆಸಬೇಕೆಂಬ ಕಾತರತೆ ಇದೆ. ಈ

ಕಾತರತೆ ಮತ್ತು ಉತ್ಸಾಹದಲ್ಲಿ ನೀವು ಭಾಗಶ: ಇದನ್ನು ಮಾಡುವುದಕ್ಕೆ ಹೋದಾಗ ಅಲ್ಲಿ ಸಾಕಷ್ಟು ಕನ್‌ಫ್ಯೂಷನ್ ಆಗುತ್ತದೆ. ಅಲ್ಲಿ ಸಾಕಷ್ಟು ಕನ್‌ಫ್ಯೂಷನ್ ಇದೆ ಎಂಬುದು ಗೊತ್ತಿದೆ. ಅಲ್ಲಿ ಮತ್ತಷ್ಟು ಕನ್‌ಫ್ಯೂಷನ್ ಆಗಬಾರದು. ಈಗ ಏನಾಗುತ್ತದೆ ಎಂದರೆ ಈ ಕಡೆ ಸದಸ್ಯರಿರಲಿ, ಆ ಕಡೆ ಸದಸ್ಯರಿರಲಿ, ಅಲ್ಲಿರತಕ್ಕಂಥ ಅಸಿಸ್ಟೆಂಟ್ ಕಮಿಷನರ್, ತಹಸೀಲ್ದಾರ್, ಚೀಫ್ ಆಫೀಸರ್ ಏನಾಗುತ್ತಾರೆ, ಅವರ ಕೈಯಲ್ಲಿ ಮಾತನಾಡಿಕೊಂಡು ಮಾಡತಕ್ಕಂಥ ವಿಚಾರ ಇದು. ಮೇಲಿನ ಅಧಿಕಾರಿಗಳು ಎಲ್ಲಾ ರಿಪೋರ್ಟ್‌ಗಳನ್ನು ತಾಲ್ಲೂಕುಗಳಿಗೆ ಹೋಗುವುದಕ್ಕೆ ಆಗುವುದಿಲ್ಲ. ಅರ್ಬನ್ ಡೆವೆಲಪ್‌ಮೆಂಟ್ ಸೆಕ್ರೆಟರಿಯವರು ಹೋಗಿ ಕುಳಿತುಕೊಂಡು ಮಾಡುವುದಕ್ಕೆ ಆಗುವುದಿಲ್ಲ. ಇದು ಕೆಳಮಟ್ಟದಲ್ಲಿ ಆಗತಕ್ಕಂಥ ಕೆಲಸ. ಆದುದರಿಂದ ಇದರಲ್ಲಿ ಹೊಂದಾಣಿಕೆ ಆಗಬೇಕು. ಮತ್ತಷ್ಟು ಕನ್‌ಫ್ಯೂಷನ್ ಆಗಬಾರದು. ಈ ತಿದ್ದುಪಡಿಯ ಬಗ್ಗೆ ಬಹಳ ಎಚ್ಚರಿಕೆಯನ್ನು ಸರಕಾರ ತೆಗೆದುಕೊಳ್ಳಬೇಕೆಂಬ ವಿಚಾರವನ್ನು ತಮ್ಮ ಮೂಲಕ ಮಾನ್ಯ ಮಂತ್ರಿಗಳ ಹಾಗೂ ಸರಕಾರದ ಗಮನಕ್ಕೆ ತಂದಿದ್ದೇನೆ.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಅಧ್ಯಕ್ಷರೇ, ಒಂದೇ ಒಂದು ವಿಚಾರ.

ಅಧ್ಯಕ್ಷರು.—ಫ್ಲಾಗ್ ವಿಚಾರ ಅಲ್ಲವೇ. ಅದನ್ನು ಮುಂಗಿಸಿದರಲ್ಲ. ಅವರು ಯೂನಿಫಾರಂ ಆದಂಥ ಕಾನೂನನ್ನು ತರುತ್ತೇವೆಂದು ಹೇಳಿದರಲ್ಲ.

ಶ್ರೀ ಕೆ. ಶಿವಮೂರ್ತಿ.—ಮಾನ್ಯ ಅಧ್ಯಕ್ಷರೇ ತಮ್ಮ ಮೂಲಕ ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದು ಎಂದರೆ, ಮುನಿಸಿಪಲ್ ಲಿಮಿಟ್ಸ್‌ನಲ್ಲಿ ಬರತಕ್ಕಂಥ ಮತದಾರರ ಬಗ್ಗೆ ಹೇಳುವುದಾದರೆ, ದಾವಣಗೆರೆ ಮತ್ತು ಚಿತ್ರದುರ್ಗದಲ್ಲಿ ಇರತಕ್ಕಂಥ ಸ್ಲಮ್‌ನಲ್ಲಿ ವಾಸ ಮಾಡತಕ್ಕಂಥ ಜನ ಯಾರಿದ್ದಾರೆ ಅವರುಗಳಿಗೆ ಪರ್ಮನೆಂಟ್ ಆಗಿ ಸೈಟ್ ಕೊಟ್ಟಿಲ್ಲ, ಆದಕ್ಕೋಸ್ಕರ ಅವರು ಮಂಡಲ ಪಂಚಾಯತಿ ವ್ಯಾಪ್ತಿಗೆ ಹೋಗಿದ್ದಾರೆ. ಅವರು ಓಟರ್ಸ್ ಲಿಸ್ಟ್‌ನಲ್ಲಿ ಅಲ್ಲಿಯೂ ಉಳಿದುಕೊಂಡಿದ್ದಾರೆ. ಇಲ್ಲೂ ಅಂದರೆ ಮುನಿಸಿಪಾಲಿಟಿಯೂ ಉಳಿದುಕೊಂಡಿದ್ದಾರೆ. ಮಂಡಲ್ ಪಂಚಾಯತಿ ಓಟರ್ ಲಿಸ್ಟ್‌ನಲ್ಲಿ ಎಂ.ಎಲ್.ಎ. ಮತ್ತು ಓಟರ್ ಲಿಸ್ಟ್‌ನಲ್ಲಿ ಎರಡರಲ್ಲೂ ಉಳಿದಿದ್ದಾರೆ. ಎರಡು ಕ್ಷೇತ್ರದಲ್ಲೂ ಅವರ ಹೆಸರು ಬರುತ್ತದೆ. ಈ ರೀತಿ ಎರಡು ಸಾವಿರ ಮತದಾರರು ದಾವಣಗೆರೆಯಲ್ಲಿದ್ದಾರೆ. ನನ್ನ ಕ್ಷೇತ್ರದಲ್ಲೂ ಇದ್ದಾರೆ. ಚಿತ್ರದುರ್ಗದಲ್ಲಿ ವೆಂಕಟೇಶ್ವರ ನಗರ ಎಂದು ಇದೆ.

ಅಧ್ಯಕ್ಷರು.—ಅದು ಅಪ್ರಕೃತ. ನೀವು ಡೀಟೈಲ್ಸ್‌ಗೆ ಹೋಗುತ್ತಿದ್ದೀರಿ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ

" ರ್ಣನೇ ಇಸವಿಯ ಕರ್ನಾಟಕ ಸ್ಥಳೀಯ ಸಂಸ್ಥೆಗಳ ಕಾನೂನು (ತಿದ್ದುಪಡಿ) ವಿಧೇಯಕವನ್ನು ಸಭೆಯು ಪರ್ಯಾಲೋಚಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸಂವುದು.

ಖಂಡ ೨ ರಿಂದ ೪ರವರೆಗೆ

ಅಧ್ಯಕ್ಷರು.—ಖಂಡ ೨ ರಿಂದ ೪ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ ೨ ರಿಂದ ೪ರವರೆಗೆ ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ ..ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ ಅವತರಣಿಕೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ಈ ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾವವನ್ನು ಅಂಗೀಕರಿಸಲಾಯಿತು.

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಅವತರಣಿಕೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಎಂ. ವೀರಪ್ಪ ಮೊಯಿಲಿ (ಕಾನೂನು, ಸಂಸದೀಯ ವ್ಯವಹಾರ, ವಾರ್ತಾ, ಮತ್ತು ಪ್ರವಾಸೋದ್ಯಮ ಸಚಿವರು).—

ಅಧ್ಯಕ್ಷರೇ, ಪ್ರಸ್ತಾವ ಏನೆಂದರೆ, ''ಗರ್ಭಿಣಿ ಇಸವಿಯ ಕರ್ನಾಟಕ ಸ್ಥಳೀಯ ಸಂಸ್ಥೆಗಳ ಕಾನೂನು (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು."

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ,

''ಗರ್ಭಿಣಿ ಇಸವಿಯ ಕರ್ನಾಟಕ ಸ್ಥಳೀಯ ಸಂಸ್ಥೆಗಳ ಕಾನೂನು (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ಅಧ್ಯಕ್ಷರು.—ಈಗ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲಿನ ಚರ್ಚೆಯನ್ನು ಮುಂದುವರೆಸೋಣ.

ಶ್ರೀ ಸಿ. ಬೈರೇಗೌಡ.—ಮಾನ್ಯ ಅಧ್ಯಕ್ಷರೇ ನನ್ನ ಗಮನ ಸೆಳೆಯುವ ಸೂಚನೆಗೆ ಮಾನ್ಯ ಮಂತ್ರಿಗಳು ರೆಡಿಯಾಗಿದ್ದಾರೆ. ಅವಕಾಶ ಕೊಟ್ಟರೆ ನಾನು ಮಾನ್ಯಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ ಗಮನ ಸೆಳೆಯುವ ಸೂಚನೆ ತೆಗೆದುಕೊಳ್ಳುವುದಕ್ಕೆ ನನ್ನ ವಿರೋಧವೇನು ಇಲ್ಲ. ಇಲ್ಲಿ ಇರತಕ್ಕಂಥ ಪ್ರಶ್ನೆ ಏನೆಂದರೆ ಅನೇಕ ಜನ ಮಾನ್ಯ ಸದಸ್ಯರು ರಾಜ್ಯಪಾಲರ ಭಾಷಣದ ಮೇಲೆ ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಬೇಕೆಂದು ಕಾತುರದಿಂದ ಇದ್ದಾರೆ. ಇನ್ನು ಎರಡನೆಯದು ರೈತರ ಬಗ್ಗೆ ಮುಖ್ಯವಾದ ವಿಷಯವನ್ನು ಚರ್ಚೆ ಮಾಡಲು ಇವತ್ತು ನಾಲ್ಕು ಗಂಟೆ ಸಮಯವನ್ನು ತಾವು ಕೊಟ್ಟಿದ್ದೀರಿ ಆದಕ್ಕೆ ನಮಗೆ ಸಮರ್ಪಕವಾದ ಉತ್ತರ ಸಿಗಬೇಕಾಗುತ್ತದೆ. ಅದಕ್ಕೆ ತಾವೊಂದು ಸಮಯ ನಿಗದಿ ಮಾಡಿ ಅದಷ್ಟು ಬೇಗ ಎಲ್ಲಾ ಕಾರ್ಯಕ್ರಮಗಳನ್ನು ಮುಗಿಸುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನುಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರಾದ ಬೈರೇಗೌಡರು ಕಳುಹಿಸಿಕೊಟ್ಟಿರತಕ್ಕಂಥ ವಿಚಾರ ರೈತರ ವಿಚಾರ. ಇದು ಬಹಳ ಪ್ರಮುಖವಾದ ವಿಚಾರವಾಗಿದೆ. ಕೋಲಾರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಎಲೆಕ್ಟ್ರಿಸಿಟಿ ಪ್ರಾಬ್ಲಂ ಬಹಳ ವರಸ್ಟ್ ಆಗಿದೆ. ಅದೂ ಕಳೆದ ೫-೬ ತಿಂಗಳುಗಳಿಂದ. ಆದ್ದರಿಂದ ದಯವಾಡಿ ಇದನ್ನು ತೆಗೆದುಕೊಳ್ಳಬೇಕೆಂದು ನಾನು ಆಗ್ರಹಪೂರ್ವವಾಗಿ ಹೇಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ.—ನಾನು ಹೇಳಿದ್ದು ಒಂದು ಸಮಯ ನಿಗದಿ ಮಾಡಿ ಎಂದು, ಅದಕ್ಕೆ ನನ್ನ ವಿರೋಧ ಇಲ್ಲ.

ಗಮನ ಸೆಳೆಯುವ ಸೂಚನೆಗಳು

ರಾಜ್ಯದಲ್ಲಿ ವಿದ್ಯುತ್ ಕೊರತೆಯಿಂದ ಗ್ರಾಹಕರಿಗೆ ಮತ್ತು ವ್ಯವಸಾಯಗಾರರಿಗೆ ತೊಂದರೆಯಾಗಿರುವುದು

ಶ್ರೀ ಸಿ ಬೈರೇಗೌಡ.—ಮಾನ್ಯ ಅಧ್ಯಕ್ಷರೇ ಕರ್ನಾಟಕ ರಾಜ್ಯದಲ್ಲಿ ವಿದ್ಯುತ್ ಸರಬರಾಜಿನಲ್ಲಿರತಕ್ಕಂಥ ಅಡೆತಡೆಗಳನ್ನು ಎಲ್ಲಾ ಗ್ರಾಹಕರಿಗೂ ಪ್ರಮುಖವಾಗಿ ವ್ಯವಸಾಯಗಾರರಿಗೆ ತೊಂದರೆಯಾಗಿರುವ ಬಗ್ಗೆ ನಾನು ಸರ್ಕಾರದ ಗಮನ ಸೆಳೆಯುತ್ತೇನೆ.

ಶ್ರೀ ಸಿ. ಭೈರೇಗೌಡ.—ಸ್ವಾಮಿ ಹೇಳಿಕೆಯು ಕಾಪಿ ಬಂದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ ಸರ್ಕಾರ ನಿದ್ರಾವಸ್ಥೆಯಲ್ಲಿದೆಯೇ ಹೇಗೆ? ತಮ್ಮ ಇಲಾಖಾಧಿಕಾರಿಗಳು ಏನು ಮಾಡುತ್ತಿದ್ದಾರೆ? ಮಂತ್ರಿಗಳ ಸಿಬ್ಬಂದಿ ವರ್ಗದವರು ಏನು ಮಾಡುತ್ತಿದ್ದಾರೆ?

ಅಧ್ಯಕ್ಷರು.—ಅದಕ್ಕೆ ನಾನು ಹೇಳಿದೆಂದು ಇದನ್ನು ಮಧ್ಯಾಹ್ನ ತೆಗೆದುಕೊಳ್ಳೋಣವೆಂದು.